بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہٖ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 12

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

02 ಏಪ್ರಿಲ್ 2020, 02 ಶಹಾದತ್ 1399 ಹಿಜರಿ ಶಮ್‌ಸಿ,
08 ಶಾಬಾನ್ 1441 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ

## ಅಲ್ಲಾಹನ ಉಪದೇಶ

وَمَا کَانَ اللّٰہُ لِیُطۡلِعَکُمۡ عَلَی الۡغَیۡبِ
وَلٰکِنَّ اللّٰہَ یَجۡتَبِیۡ مِنۡ رُّسُلِہٖ مَنۡ یَّشَآءُ ۪
فَاٰمِنُوۡا بِاللّٰہِ وَرُسُلِہٖ ۚ وَاِنۡ تُؤۡمِنُوۡا
وَتَتَّقُوۡا فَلَکُمۡ اَجۡرٌ عَظِیۡمٌ

*(ಆಲಿ ಇಮ್ರಾನ್ 180)*

ಅಂದರೆ: ಅಲ್ಲಾಹನು ತನ್ನ ಸಂದೇಶವಾಹಕರಿಂದ ತಾನಿಚ್ಛಿಸುವವರನ್ನು ಆಯ್ಕೆ ಮಾಡುತ್ತಾನೆ. ಆದ್ದರಿಂದ ನೀವು ಅಲ್ಲಾಹನ ಮೇಲೂ ಅವನ ಸಂದೇಶವಾಹಕರ ಮೇಲೂ ವಿಶ್ವಾಸವಿಡಿರಿ. ನೀವು ವಿಶ್ವಾಸ ಹೊಂದಿ ಭಯ-ಭಕ್ತಿಯುಳ್ಳವರಾದರೆ ನಿಮಗೆ ಮಹತ್ತಾದ ಪ್ರತಿಫಲವಿದೆ.

**ತನ್ನ ಜೀವನದಲ್ಲಿ ಅಲ್ಲಾಹನೊಡನೆ ಸಂಬಂಧ ಕಳಚಿಕೊಂಡವನು ಅಪರಾಧಿಯಾಗಿದ್ದಾನೆ.**

**ಯಾರಾದರು ಅಲ್ಲಾಹನೆಡೆ ಉದಾಸೀನತೆ ತೋರುವವನಾದರೆ ಅಲ್ಲಾಹನು ಅವರಿಂದ ಬೇಸರಗೊಂಡಿರುತ್ತಾನೆ. ಅಲ್ಲಾಹನನ್ನು ಪ್ರೀತಿಸುವವನಾದರೆ ಮತ್ತು ನೀರಿನ ಹಾಗೆ ಅವನ ಕಡೆ ಹರಿಯುವುವನಾದರೆ ತಿಳಿದುಕೊಳ್ಳಿರಿ. ಅವನು ಪರಮ ದಯವಂತನಾಗಿದ್ದಾನೆ.**

**ಕೃಷಿಕನು ತನ್ನ ಹೊಲ ವ್ಯರ್ಥಗೊಳಿಸುವ ಸಾಧ್ಯತೆ ಇದೆ. ನೌಕರನು ಕೆಲಸ ಕಡೆಗಾಣಿಸಿ ನಷ್ಟವುಂಟು ಮಡಬಹುದು. ಪರೀಕ್ಷಾರ್ಥಿಯು ಅನುತ್ತೀರ್ಣನಾಗಬಹುದು. ಆದರೆ ಅಲ್ಲಾಹನ ಕಡೆ ವಾಲುವವನು ಎಂದೂ ಅಸಫಲತೆ ಕಾಣುವುದಿಲ್ಲ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ನನ್ನ ಮಾತುಗಳನ್ನು ವ್ಯರ್ಥಗೊಳಿಸದಿರಿ

ಚೆನ್ನಾಗಿ ನೆನಪಿಡಿರಿ ಮತ್ತು ಇದನ್ನು ನಿಜವೆಂದು ತಿಳಿದುಕೊಳ್ಳಿ. ಒಂದು ದಿನ ಅಲ್ಲಾಹನ ಬಳಿ ಹಾಜರಾಗಬೇಕಾಗಿದೆ. ಆದುದರಿಂದ ಉತ್ತಮ ಅವಸ್ಥೆಯಲ್ಲಿ ನಾವು ಇಲ್ಲಿಂದ ಅಗಲುವವರಾದರೆ ನಮಗೆ ಅದು ಶುಭಕರ ಹಾಗೂ ಸಂತೋಷದ ವಿಷಯವಾಗಿದೆ. ಇಲ್ಲದಿದ್ದರೆ ಅತ್ಯಂತ ಅಪಾಯಕರ ಸ್ಥಿತಿ ಎದುರಿಸಬೇಕಾಗುವುದು. ನೆನಪಿಡಿರಿ! ಕೆಟ್ಟ ಅವಸ್ಥೆಯಲ್ಲಿ ಮನುಷ್ಯನು ಅಗಲುವವನಾದರೆ, ಪರಿಣಾಮ ಇಲ್ಲಿಂದಲೇ ಪ್ರಾರಂಭವಾಗುತ್ತದೆ ಎಂದರೆ ಕೊನೆಯುಸಿರಾಟದಲ್ಲೇ ಪರಿವರ್ತನೆ ಉಂಟಾಗುತ್ತದೆ. ಅಲ್ಲಾಹನು ನುಡಿದನು. **ಇನ್ನಹು ಮೈಂ ಯಾತಿ ರಬ್ಬಹು ಮುಜ್ರಮನ್ ಫಇನ್ನ ಲಹು ಜಹನ್ನಮ. ಲಾ ಯಮೂತು ಫೀಹಾ ವಲಾ ಯಹ್‌ಯಾ** (ತಾಹಾ-75) "ಖಂಡಿತವಾಗಿಯೂ ಯಾರು ಪಾಪಿಯಾಗಿ ತನ್ನ ಪ್ರಭುವಿನ ಬಳಿಗೆ ಬರುತ್ತಾನೋ, ಅವನಿಗೆ ನರಕ ಕಾದಿದೆ, ಅಲ್ಲಿ ಅವನು ಸಾಯುವುದೂ ಇಲ್ಲ. ಬದುಕುವುದೂ ಇಲ್ಲ. ಇದು ಎಂತಹ ಸ್ಪಷ್ಟವಾದ ವಿಷಯವಾಗಿದೆ. ನಿಜವಾದ ಸುಕಭರಿತ ಜೀವನವೆಂದರೆ ಶಾಂತಿ ನೆಮ್ಮದಿಯಲ್ಲಿಯೇ ಆಗಿದೆ. ಬದಲಾಗಿ ಎಲ್ಲಾ ಹಂತದಲ್ಲೂ ಶಾಂತಿ ಕಾಪಾಡಿಕೊಂಡವನ ಜೀವನವೇ ಸಾಫಲ್ಯ ಜೀವನ ಎನ್ನಿಸುತ್ತದೆ. ಉದಾಹರಣೆಗೆ ಯಾವುದೇ ನೋವು ಅದು ಪಾರ್ಶ್ವವಾಯು ಅಥವಾ ಹಲ್ಲು ನೋವೇ ಇರಲಿ ಬಾಧಿಸಿದರೆ ಅವನು ಶವಕ್ಕಿಂತ ಕಡೆಯಾಗಿ ಬಿಡುತ್ತಾನೆ. ಎಂತಹ ಸ್ಥಿತಿ ಉಂಟಾಗುತ್ತದೆ. ಇದರಿಂದಲೇ ತಿಳಿದುಕೊಳ್ಳಿ ನರಕದ ಘೋರ ಅವಸ್ಥೆಯಲ್ಲಿ ನಮ್ಮ ಸ್ಥಿತಿ ಹೇಗಿರಬಹುದೆಂದು.

### ತನ್ನ ಜೀವನದಲ್ಲಿ ಅಲ್ಲಾಹನೊಡನೆ ತನ್ನ ಸಂಬಂಧ ಕಳಚಿಕೊಂಡವನು ಅಪರಾದಿಯಾಗಿದ್ದಾನೆ.

ತನ್ನ ಜೀವನದಲ್ಲಿ ಅಲ್ಲಾಹನೊಡನೆ ಸಂಬಂಧ ಕಳಚಿಕೊಂಡವನು ಅಪರಾಧಿಯಾಗಿರುತ್ತಾನೆ. ಅವನಿಗೆ ಆದೇಶಿಸಲಾಗಿತ್ತು. ಅವನು ಅಲ್ಲಾಹನಿಗೆ ಶರಣನಾಗಬೇಕು ಮತ್ತು ಸಜ್ಜನರೊಂದಿಗೆ ಇರಬೇಕು ಎಂದು ಆದರೆ ಅವನು ದುರಾಚಾರ ಹಾಗೂ ಕೆಟ್ಟ ಅಭಿಲಾಷೆಗಳ ದಾಸನಾದನು ಮತ್ತು ಕಿಡಿಗೇಡಿಗಳ ಹಾಗೂ ಅಲ್ಲಾಹ್ ಮತ್ತು ಅವನ ಪ್ರವಾದಿಯ ಶತ್ರುಗಳ ಒಳನಾಡ ಇಟ್ಟುಕೊಂಡವನಾದ. ಹೀಗೆ ಅವನು ತನ್ನ ನಡತೆಯಿಂದ ಅಲ್ಲಾಹನಿಂದ ತನ್ನ ಸಂಬಂಧ ಕಳಚಿಕೊಂಡದ್ದನ್ನು ತೋರಿಸಿಕೊಟ್ಟ. ಇದೊಂದು ಅಲ್ಲಾಹನ ಗುಣವಾಗಿದೆ. ಮನುಷ್ಯನು ಎತ್ತ ತಮ್ಮ ಹೆಜ್ಜೆಗಳನ್ನು ಮುಂದಿಡುತ್ತಾನೋ ಅದರ ವಿರೋಧವಾದ ಹಾನಿಯಿಂದ ದೂರವಾಗತೊಡಗುತ್ತಾನೆ. ಅವನು ಅಲ್ಲಾಹನಿಂದ ಬೇರ್ಪಟ್ಟು ದುರಾಚಾರ ಹಾಗೂ ಕೆಟ್ಟ ಅಭಿಲಾಷೆಗಳ ದಾಸನಾಗುತ್ತನೆಂದರೆ ಅವನು ಅಲ್ಲಾಹನಿಂದ ದೂರವಾಗತೊಡಗುತ್ತಾನೆ. ಹೇಗೆ ಅವನು ಅತ್ತ ಮುಂದುವರೆಯುತ್ತಾನೋ ಹಾಗೆಯೇ ಇತ್ತ ಕಡೆ ಸುಳಿವು ಕಡಿಮೆಯಾಗುತ್ತದೆ. ಇದೊಂದು ಪ್ರಸಿದ್ಧ ಮಾತಾಗಿದೆ. **"ದಿಲ್ ರಾ ಬದಲ್ ರಹೆ ಅಸ್ತ್" (ಮನಸ್ಸಿದ್ದಲ್ಲಿ ಮಾರ್ಗ).** ಆದುದರಿಂದ ಯಾರಾದರು ಅಲ್ಲಾಹನೆಡೆ ಉದಾಸೀನತೆ ತೋರುವವನಾದರೆ ಅಲ್ಲಾಹನೂ ಅವನಿಂದ ಬೇಸರಪಟ್ಟಿರುತ್ತಾನೆ. ಅಲ್ಲಾಹನನ್ನು ಪ್ರೀತಿಸುವವನಾದರೆ ಮತ್ತು ನೀರಿನ ಹಾಗೆ ಅವನ ಕಡೆ ಹರಿಯುವವನಾದರೆ ತಿಳಿದುಕೊಳ್ಳಲಿ. ಅವನು ಪರಮ ದಯಾವಂತನಾಗಿದ್ದಾನೆ. ಅತಿ ಹೆಚ್ಚು ಪ್ರೀತಿ ಮಾಡುವವನಗಿಂತಲೂ ಮಿಗಿಲಾದ ಪ್ರೀತಿ ಮಾಡುವವನು ಅಲ್ಲಾಹನಾಗಿರುತ್ತಾನೆ. ಅಲ್ಲಾಹನು ತನ್ನನ್ನು ಪ್ರೀತಿಸುವವರ ಮೇಲೆ ತನ್ನ ಅನುಗ್ರಹಗಳನ್ನು ಇಳಿಸುತ್ತಾನೆ. ಮತ್ತು ನಾನು ನಿಮ್ಮ ಜೊತೆಗಿದ್ದೇನೆ ಎಂಬ ನೆಲೆಯಲ್ಲಿ ಅವರೊಡನೆ ವರ್ತಿಸುತ್ತಾನೆ. ಎಲ್ಲಿಯವರೆಗೆ ಎಂದರೆ ಅವರ ಮಾತಿನಲ್ಲಿ, ಅವರ ತುಟಿಗಳಲ್ಲಿ ಅನುಗ್ರಹ ಪ್ರಧಾನ ಮಾಡಿರುತ್ತಾನೆ. ಜನರು ಅವರ ವಸ್ತ್ರಗಳಿಂದಲೂ ಮತ್ತು ಪ್ರತಿ ಮಾತಿನಲ್ಲೂ ಅವರಿಂದ ಅನುಗ್ರಹ ಪಡೆಯುವವರಾಗುತ್ತಾರೆ.

### ಈ ಜನಾಂಗದಲ್ಲಿ (ಮಹಮ್ಮದಿಯರ) ಇಂದಿಗೂ ತಾವು ಕಾಣಬಹುದಾಗಿದೆ

ಅಥವಾ ಯಾರು ಅಲ್ಲಾಹನದ್ದಾಗುತ್ತಾನೋ ಅಲ್ಲಾಹನು ಅವನದ್ದಾಗುತ್ತಾನೆ." ಅಲ್ಲಾಹನನ್ನು ಬಯಸಿ ಪ್ರಯತ್ನಪಡುವವನು ಎಂದೂ ಅಸಫಲತೆ ಕಾಣುವುದಿಲ್ಲ. ಅಲ್ಲಾಹನು ತನ್ನನ್ನು ಬಯಸಿ ಪ್ರಯತ್ನಪಡುವವರ ಪ್ರಯತ್ನವನ್ನು ಎಂದೂ ನಿರರ್ಥಕ ಗೊಳಿಸುವುದಿಲ್ಲ. ಕೃಷಿಕನು ತನ್ನ ಹೊಸ ಪ್ರಯತ್ನ ವ್ಯರ್ಥಗೊಳಿಸುವ ಸಾಧ್ಯತೆ ಇದೆ. ನೌಕರನು ಕೆಲಸ ಕಡೆಗಣಿಸಿ ನಷ್ಟ ಉಂಟು ಮಾಡಬಹುದು. ಪರೀಕ್ಷಾರ್ಥಿಯು ಅನುತ್ತೀರ್ಣನಾಗಬಹುದು. ಆದರೆ ಅಲ್ಲಾಹನ ಕಡೆ ವಾಲುವವನೂ ಎಂದೂ ಅಸಫಲತೆ ಕಾಣುವುದಿಲ್ಲ. ಇದು ಅವನ ಅಚಲ ವಾಗ್ದಾನವಾಗಿದೆ. **ಅಲ್ಲಝೀನ ಜಾಹದೂ ಫೀನಾ ಲನಹದಿಯನ್ನಹುಮ್ ಸುಬುಲನ** (ಅಲ್ ಅನಕಬೂತ್-70) ನಮ್ಮ ಮಾರ್ಗದಲ್ಲಿ

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

**ಮಹಿಳೆಯರ ಎಲ್ಲಾ ಚಟುವಟಿಕೆಗಳು ಖಲೀಫರು ಸಿದ್ಧಪಡಿಸಿದ ಯೋಜನೆಗಳಂತೆ ಇರಬೇಕು. ಹಾಗೂ ಅವರ ಪ್ರಗತಿಗಳಿಗೋಸ್ಕರ ಇರಬೇಕು.**

**ಮಕ್ಕಳ ತರಬೇತಿಯ ವಿಷಯದಲ್ಲಿ ತಮ್ಮ ಹೊಣೆಗಾರಿಕೆಯನ್ನು ತಿಳಿದಿರಬೇಕು, ಅವರಿಗೆ ಕಷ್ಟಗಳನ್ನು ಸಹಿಸುವಂತೆ ತರಬೇತಿ ನೀಡಬೇಕು. ಧರ್ಮದ ಸಮಸ್ಯೆಗಳ ಕುರಿತು ಮಾಹಿತಿ ನೀಡಬೇಕು, ಅವರಲ್ಲಿ ಅಲ್ಲಾಹ್, ಪ್ರವಾದಿ(ಸ), ಮಸೀಹ್ ಮೌಊದ್ ಮತ್ತು ಖಲೀಫರೊಡನೆ ಪ್ರೀತಿ ಹಾಗೂ ಅನುಸರಣೆಯ ಭಾವನೆ ಬೆಳೆಸಬೇಕು. ಅವರಿಗೆ ಜೀವಿತಾರ್ಪಣೆ ಮಾಡುವ ಉತ್ಸಾಹ ನೀಡಬೇಕು.**

**ಜಮಾಅತ್ತಿನ ಐಕ್ಯತೆಗಾಗಿ ಅವರು ಧರ್ಮ ಬೋಧಿಸಿದ ಶಿಕ್ಷಣದಂತೆ ಎಲ್ಲಾ ರೀತಿಯ ತ್ಯಾಗಗಳಿಗಾಗಿ ಸಿದ್ಧರಾಗಿರಬೇಕು. ನೈತಿಕ ಹಾಗೂ ಆಧ್ಯಾತ್ಮಿಕ ಸುಧಾರಣೆ ಮತ್ತು ಅದರ ಮಾರ್ಗಗಳ ಕುರಿತು ಚಿಂತನೆಯಲ್ಲಿರಬೇಕು.**

---

## ಲಜ್‌ನಾ ಇಮಾಅಲ್ಲಾಹ್, ಹಾಲ್ಯಾಂಡಿನ 50ನೇ ಕನಕ ಮಹೋತ್ಸವದ ಸಂದರ್ಭದಲ್ಲಿ ಪ್ರಕಟವಾದ 'ಖದೀಜ' ಪತ್ರಿಕೆಯ ವಿಶೇಷಾಂಕಕ್ಕೆ ಸಯ್ಯದುನಾ ಹಝ್ರತ್ ಅಮೀರುಲ್ ಮುಮಿನೀನ್‌ರವರು ನೀಡಿದ ವಿಶೇಷ ಸಂದೇಶ

بسم اللہ الرحمٰن الرحیم

نحمدہ و نصلی علی رسولہ الکریم وعلی عبدہ المسیح الموعود

خدا کے فضل اور رحم کے ساتھ

ھو الناصر

ಹಾಲ್ಯಾಂಡಿನ ಪ್ರೀತಿಯ ಲಜ್‌ನಾ ಇಮಾಅಲ್ಲಾಹ್ ಸದಸ್ಯರೇ!

**ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತಹು.** السلام علیکم ورحمۃ اللہ وبرکاتہ

ಲಜ್‌ನಾ ಇಮಾಅಲ್ಲಾಹ್, ಹಾಲ್ಯಾಂಡ್ ತನ್ನ ಸ್ಥಾಪನೆಯ 50 ವರ್ಷವನ್ನು ಪೂರ್ಣಗೊಳಿಸಿದ ನಿಮಿತ್ತ ಜ್ಯುಬಿಲಿಯನ್ನು ಆಚರಿಸುತ್ತಿದೆ ಮತ್ತು ಈ ಸಂದರ್ಭದಲ್ಲಿ ಪತ್ರಿಕೆ 'ಖದೀಜ'ದ ವಿಶೇಷಾಂಕವನ್ನು ಪ್ರಕಟಿಸುತ್ತಿದೆ ಎಂದು ತಿಳಿದು ತುಂಬ ಸಂತೋಷವಾಗಿದೆ. ಅಲ್ಲಾಹನು ಎಲ್ಲಾ ರೀತಿಯಲ್ಲಿ ಅನುಗ್ರಹಿಸುವಂತಾಗಲಿ. ಆಮೀನ್

ಈ ಸುವರ್ಣ ಸಂದರ್ಭದಲ್ಲಿ ಮುಕರ್‌ರಮ ಸದರ್ ಸಾಹಿಬ ಲಜ್‌ನಾ ಇಮಾಅಲ್ಲಾಹ್‌ರವರು ನನ್ನಲ್ಲಿ ಒಂದು ಸಂದೇಶವನ್ನು ಕಳಿಹಿಸಲು ಮನವಿ ಮಾಡಿಕೊಂಡಿದ್ದರು. ಆದುದರಿಂದ ಅವರಿಗೆ ನನ್ನ ಸಂದೇಶವೇನೆಂದರೆ – ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಿಳಿಸಿದ ಪ್ರಕಾರ ಈ ಸಂಘಟನೆಯ ಉದ್ದೇಶ ತನ್ನ ನಡತೆ ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ಪಡೆಯುವುದಾಗಿದೆ ಮತ್ತು ಖಲೀಫರೊಂದಿಗೆ ಆಳವಾದ ಸಂಬಂಧ ಹೊಂದುವುದಾಗಿದೆ. ಸಂಘಟನೆಯ ಈ ಉದ್ದೇಶವನ್ನು ನಾವು ದೃಷ್ಟಿಯಲ್ಲಿರಿಸಿ ಕೊಳ್ಳಬೇಕಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ತಾ 25ನೇ ಡಿಸಂಬರ್, 1922ರಂದು ಲಜ್‌ನಾ ಇಮಾಅಲ್ಲಾಹ್‌ವನ್ನು ಸ್ಥಾಪಿಸಿದರು. ಅವರು ಒಂದು ಲೇಖನವನ್ನು ಬರೆದು ಅದರಲ್ಲಿ ಖಾದಿಯಾನದ ಅಹ್ಮದಿ ಮಹಿಳೆಯರಿಗೆ ಈ ಕೆಳಗಿನ ಮಾತುಗಳನ್ನು ತಿಳಿಸಿ ಇದರ ಉದ್ದೇಶಗಳನ್ನು ಮನಗಂಡು, ಪರಸ್ಪರ ಒಗ್ಗೂಡಿ ಕೆಲಸ ಮಾಡುವಂತೆ ಹೇಳಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ದೃಷ್ಟಿಯಲ್ಲಿ ಈ ಉದ್ದೇಶಗಳಿದ್ದವು: ಮಹಿಳೆಯರು ತಮ್ಮ ಹಾಗೂ ಇತರ ಮಹಿಳೆಯರ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಅವರಿಗೆ ತಮ್ಮದೇ ಆದ ಒಂದು ಸಂಸ್ಥೆ ಇರಬೇಕು. ಅದರ ಕೆಲವು ನಿಯಮಾವಳಿ ಇರಬೇಕು. ಅವರು ಜಲ್ಸಗಳಲ್ಲಿ ಇಸ್ಲಾಮಿನ ಸಮಸ್ಯೆಗಳ ಕುರಿತು ತಾವೇ ಬರೆದಂತಹ ಲೇಖನಗಳನ್ನು ಓದಬೇಕು.

ಅವರು ಇಸ್ಲಾಮ್ ಧರ್ಮದ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸಬೇಕು. ಸಂಸ್ಥೆಯ ಮಹಿಳೆಯರ ಎಲ್ಲಾ ಚಟುವಟಿಕೆಗಳು ಖಲೀಫರು ತಯಾರಿಸಿದ ಯೋಜನೆಗಳ ಪ್ರಕಾರ, ಅದರ ಪ್ರಗತಿಗೋಸ್ಕರ ಇರಬೇಕು. ಜಮಾಅತ್ತಿನ ಐಕ್ಯತೆಗಾಗಿ ಅವರು ಧರ್ಮದ ತತ್ವಗಳಂತೆ ಎಲ್ಲಾ ರೀತಿಯ ತಯಾರಿಗಳಿಗಾಗಿ ಸಿದ್ಧರಿರಬೇಕು ನೈತಿಕ ಹಾಗೂ ಆಧ್ಯಾತ್ಮಿಕ ಸುಧಾರಣೆ ಹಾಗೂ ಅದರ ಮಾರ್ಗಗಳ ಬಗ್ಗೆ ಚಿಂತಿಸಬೇಕು. ಮಕ್ಕಳ ತರಬೇತಿಯ ವಿಷಯದಲ್ಲಿ ತಮ್ಮ ಹೊಣೆಗಾರಿಕೆಗಳನ್ನು ವಿಶೇಶವಾಗಿ ತಿಳಿದಿರಬೇಕು. ಮಕ್ಕಳಿಗೆ ಅವರ ತಾಯಿಯಂದಿರು ಧಾರ್ಮಿಕ ಜೀವನವು ಮಾದರಿಯಾಗಿರಬೇಕು. ಅವರು ಕಷ್ಟಗಳನ್ನು ಸಹಿಸುವಂತೆ ಮಾಡಬೇಕು. ಧರ್ಮದ ಸಮಸ್ಯೆಗಳ ಬಗ್ಗೆ ಅವರಿಗೆ ಮಾಹಿತಿ ನೀಡಬೇಕು. ಅವರಲ್ಲಿ ಅಲ್ಲಾಹ್, ಪ್ರವಾದಿ(ಸ), ಮಸೀಹ್ ಮೌಊದ್ ಮತ್ತು ಖಲೀಫರೊಡನೆ ಪ್ರೀತಿ ಹಾಗೂ ಅನುಸರಣೆಯ ಭಾವನೆಯನ್ನು ಬೆಳೆಸಬೇಕು. ಅವರಲ್ಲಿ ನೀವು ಬಲಿದಾನದ ಬಗ್ಗೆ ಉತ್ಸಾಹವನ್ನು ಬೆಳೆಸಬೇಕು. ಸಂಸ್ಥೆಯ ಸದಸ್ಯರು ಪರಸ್ಪರ ಸಹಕಾರ ನೀಡುವ ಮೂಲಕ ಕಾರ್ಯಪ್ರವೃತ್ತರಾಗಬೇಕು ಮತ್ತು ಇತರರ ತಪ್ಪುಗಳನ್ನು ಕ್ಷಮಿಸಬೇಕು. ತಾಳ್ಮೆ ಮತ್ತು ಶೌರ್ಯದ ಗುಣಗಳನ್ನು ಬೆಳೆಸಬೇಕು. ಜನರ ಅಪಹಾಸ್ಯ ಹಾಗೂ ಟೀಕೆಗಳನ್ನು ಧೈರ್ಯದಿಂದ ಎದುರಿಸುವ ಗುಣ ಬೆಳೆಸಬೇಕು. ಏಕೆಂದರೆ ಅವರು ಇತರ ಮಹಿಳೆಯರಿಗೆ ಮಾದರಿಯಾಗಿರುವಂತೆ ಇರಬೇಕು. ಈ ಉದ್ದೇಶ ಈಡೇರಿಸುವುದಕ್ಕಾಗಿ ಇತರ ಮಹಿಳೆಯರನ್ನು ಸಹಪಾಠಿಗಳನ್ನಾಗಿ ಮಾಡಿಕೊಳ್ಳಬೇಕು. ಜಮಾಅತ್ ಎಂಬುದು ಯಾವುದೇ ಒಂದು ವಿಶೇಶ ಗುರುವಿನ ಹೆಸರಲ್ಲ. ಹಿರಿಯರು, ಕಿರಿಯರು, ಬಡವರು, ಬಲ್ಲಿದವರು ಎಲ್ಲರ ಹೆಸರು ಜಮಾಅತ್ ಆಗಿದೆ. ಪರಸ್ಪರ ಪ್ರೀತಿ ಮತ್ತು ಸಮಾನತೆಯನ್ನು ಬೆಳೆಸುವ ಪ್ರಯತ್ನ ಮಾಡಬೇಕು. ಎಲ್ಲಾ ಸಹಕಾರ ಮತ್ತು ಜಯಗಳು ಅಲ್ಲಾಹನಿಂದ ಬರುತ್ತವೆ. ಅದಕ್ಕಾಗಿ ಪ್ರಾರ್ಥಿಸಬೇಕು. ಆ ದೈವಿಕ ಉದ್ದೇಶಗಳು ನಮ್ಮ ಜನ್ಮದಲ್ಲಿ ದೃಷ್ಟಿಯಲ್ಲಿರಿಸಿಕೊಳ್ಳಬೇಕು. ಅದರಲ್ಲಿ ಪ್ರಾರಂಭಿಕವಾಗಿ 13 ಮಹಿಳೆಯರು ಸಹಿ ಹಾಕಿದರು. ಅವರು ಹುಝೂರ್(ರ) ರವರ ಹೇಳಿಕೆಯ ಪ್ರಕಾರ ಹಝ್ರತ್ ಉಮ್ಮುಲ್ ಮೂಮಿನೀನ್(ರ) ಅವರ ಮನೆಯಲ್ಲಿ ಒಟ್ಟು ಗೂಡಿದರು. ಅವರನ್ನು ಹುಝೂರ್(ರ) ಉದ್ದೇಶಿಸಿ ಮಾತನಾಡಿದರು: ಅದರೊಂದಿಗೆಯೇ ಲಜ್‌ನಾ ಸಂಘಟನೆ ಕಾರ್ಯರೂಪಕ್ಕೆ ಬಂದಿತು. ಹುಝೂರ್(ರ) ಅವರಿಗೆ ಅಲ್ಲಾಹನು ದೇವವಾಣಿಯ ಮೂಲಕ ಹೇಳಿದನು – ನೀವು ಶೇ50 ರಷ್ಟು ಮಹಿಳೆಯರನ್ನು ಸುಧಾರಿಸಿದರೆ ಇಸ್ಲಾಮ್ ಧರ್ಮಕ್ಕೆ ಪ್ರಗತಿ ಲಭಿಸುವುದು. ಅವರು ಲಜ್‌ನಾ ಇಮಾಅಲ್ಲಾರವರ ತರಬೇತಿ ಹಾಗೂ ಸಂಘಟನೆಯ ಕಡೆಗೆ ಸದಾ ಹೆಚ್ಚಿನ ರೀತಿಯಲ್ಲಿ ಗಮನ ವಹಿಸುತ್ತಿದ್ದರು.

ಆದುದರಿಂದ ನೀವು ಈ ಉದ್ದೇಶಗಳನ್ನು ಸದಾ ದೃಷ್ಟಿಯಲ್ಲಿರಿಸಿಕೊಳ್ಳಿರಿ. ಅದಕ್ಕಾಗಿಯೇ ಲಜ್‌ನಾ ಇಮಾಅಲ್ಲಾಹ್‌ವನ್ನು ಸ್ಥಾಪಿಸಲಾಯಿತು. ಅದಕ್ಕಾಗಿ ಖಲೀಫರ ಪ್ರಾರ್ಥನೆಗಳು ಮತ್ತು ಮಾರ್ಗದರ್ಶನವು ಅತ್ಯಂತ ಮುಖ್ಯವಾಗಿದೆ. ನೀವು ಈ ಪ್ರಾಥಮಿಕ ಹಂತದ ಉಪದೇಶಗಳನ್ನು ಪಾಲಿಸಿದರೆ ಇನ್‌ಶಾಅಲ್ಲಾಹ್, ನಮ್ಮ ಎಲ್ಲಾ ಕಾರ್ಯಕ್ರಮಗಳು ಮತ್ತು ಯೋಜನೆಗಳು ಯಶಸ್ವಿಯಾಗುವುವು. ನಮ್ಮ ಪ್ರತಿ ಹೆಜ್ಜೆಯು ಪ್ರಗತಿಯ ಕಡೆಗೆ ಸಾಗುವುದು. ಅಲ್ಲಾಹನು ನಮಗೆ ಆ ಭಾಗ್ಯ ದಯಪಾಲಿಸಲಿ– ಆಮೀನ್.

ವಸ್ಸಲಾಮ್
ಮಿರ್ಝಾ ಮಸ್‌ರೂರ್ ಅಹ್ಮದ್
**ಖಲೀಫತುಲ್ ಮಸೀಹ್ ಖಾಮಿಸ್**

# ಜುಮುಅ ಖುತ್‌ಬ

**ಹಝ್ರತ್ ಮುಸ್‌ಅಬ್ ಬಿನ್ ಉಮೈರ್.... ಇವರು ಹಿಜ್ರತ್‌ನಿಂದ ಮುಂಚೆ ಮೊಟ್ಟಮೊದಲ ಪ್ರಚಾರಕರಾಗಿದ್ದರು. ಹೀಗೆ ಅವರಿಂದ ಇಸ್ಲಾಮ್ ಧರ್ಮವು ಹರಡಿತು**

**ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಅವರು ಮದೀನದಲ್ಲಿ ಮೊಟ್ಟಮೊದಲ ಬಾರಿ ಜುಮುಅ ನಿರ್ವಹಿಸಿದ ವ್ಯಕ್ತಿ ಆಗಿದ್ದರು**

**ಮನಮೋಹಕ ಹಾಗೂ ತಮ್ಮ ಕುಟುಂಬದಲ್ಲಿ ಬಹಳ ಆತ್ಮೀಯರಾದ,ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಮುಸ್‌ಅಬ್ ಬಿನ್ ಉಮೈರ್ ರಝಿಯಲ್ಲಾಹು ಅನ್ಹುರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಖಿಲಾಫತ್ ಹಾಗೂ ಜಮಾಅತ್ತಿನೊಂದಿಗೆ ವಿಧೇಯ ಹಾಗೂ ನಿಷ್ಠಾವಂತರಾದ ದಿವಂಗತರಾದ ಮುಕರ್ರಮ್ ಮಲಿಕ್ ಮುನವ್ವರ್ ಅಹ್ಮದ್ ಜಾವೇದ್ ಸಾಹೆಬ್ ಹಾಗೂ ಮುಕರ್ರಮ್ ಮುನವ್ವರ್ ಶಮೀಮ್ ಅಹ್ಮದ್ ಖಾಲಿದ್ ಸಾಹೆಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ಜುಮ್‌ಆ ನಮಾಝ್‌ನ ನಂತರ ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28-02-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ ـ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಇಂದು ನಾನು ವಿವರಿಸಲಿರುವ ಬದರಿ ಸಹಾಬಿಯ ಹೆಸರು ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ). ಅವರು ಖುರೈಶಿಗಳ ಅಬ್ದುದ್ದಾರ್ ಗೋತ್ರಕ್ಕೆ ಸೇರಿದ್ದರು. ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಅವರ ಉಪನಾಮ ಅಬೂ ಅಬ್ದುಲ್ಲಾ ಎಂದಾಗಿತ್ತು. ಅದಲ್ಲದೆ ಅವರ ಉಪನಾಮಗಳು ಅಬೂ ಮುಹಮ್ಮದ್ ಎಂದು ಸಹ ಹೇಳಲಾಗುತ್ತದೆ. ಹಝ್ರತ್ ಮುಸ್‌ಅಬ್(ರ) ಅವರ ತಂದೆಯ ಹೆಸರು ಉಮೈರ್ ಬಿನ್ ಹಾಶಿಮ್ ಮತ್ತು ಅವರ ತಾಯಿಯ ಹೆಸರು ಖನ್ನಾಸ್ ಅಥವಾ ಹನ್ನಾಸ್ ಬಿನ್ತ್ ಮಾಲಿಕ್ ಎಂದಾಗಿತ್ತು ಅವರು ಮಕ್ಕದ ಒಬ್ಬ ಐಶ್ವರ್ಯವಂತೆಯಾದ ಮಹಿಳೆಯಾಗಿದ್ದರು. ತಂದೆ ತಾಯಂದಿರು ಹಝ್ರತ್ ಮುಸ್‌ಅಬ್‌ರನ್ನು ಬಹಳ ಪ್ರೀತಿಸುತ್ತಿದ್ದರು. ಅವರ ಮಾತೆ ಅವರನ್ನು ಬಹಳ ಅಭಿಮಾನದಿಂದ ಶ್ರೀಮಂತಿಕೆಯಲ್ಲಿ ಬೆಳೆಸಿದ್ದರು. ಅತ್ಯಂತ ಬೆಲೆಬಾಳುವ ಪೋಷಾಕನ್ನು ಉಡಿಸುತ್ತಿದ್ದರು. ಮಕ್ಕದಲ್ಲಿ ದೊರೆಯುವ ಅತ್ಯುತ್ತಮ ಸುಗಂಧ ದ್ರವ್ಯವನ್ನು ಹಝ್ರತ್ ಮುಸ್‌ಅಬ್ ಬಳಸುತ್ತಿದ್ದರು. ಶ್ರೀಮಂತರು ಮಾತ್ರ ಧರಿಸುತ್ತಿದ್ದ ಹಝ್ರ್‌ವೌತ್‌ನಿಂದ ತಯಾರಿಸಲಾಗುವ ಬೆಲೆಬಾಳುವ ಪಾದರಕ್ಷೆಗಳನ್ನು ಹಝ್ರತ್ ಮುಸ್‌ಅಬ್ ಉಪಯೋಗಿಸುತ್ತಿದ್ದರು. ಅವರ ಪತ್ನಿಯ ಹೆಸರು ಹಮ್ನ ಬಿನ್ತ್ ಜಹಶ್ ಆಕೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿ ಉಮ್ಮುಲ್ ಮೂಮಿನೀನ್ ಹಝ್ರತ್ ಝೈನಬ್ ಬಿನ್ತ್ ಜಹಶ್‌ರವರ ಸಹೋದರಿಯಾಗಿದ್ದರು. ಹಮ್ನ ಬಿನ್ತ್ ಜಹಶ್ ಅವರಿಂದ ಓರ್ವ ಪುತ್ರಿ ಝೈನಬ್ ಜನಿಸಿದರು. ರಸೂಲುಲ್ಲಾಹ್ ಅಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಮುಸ್‌ಅಬ್(ರ) ಅವರನ್ನು ನೆನಪಿಸಿಕೊಂಡಾಗ ಹೀಗೆ ಹೇಳುತ್ತಿದ್ದರು: ನಾನು ಮುಸ್‌ಅಬ್ ಅವರಿಗಿಂತ ಹೆಚ್ಚು ಸುಂದರ ಹಾಗೂ ಶ್ರೀಮಂತಿಕೆಯಲ್ಲಿ ಬೆಳೆದ ಯಾರನ್ನು ಕಾಣಲಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ-3, ಪುಟ-85-86, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್ 1990, ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ-5, ಪುಟ-175, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2003, ಸೀರತುಸ್ಸಹಾಬ, ಶಾಹ್ ಮುಯೀನುದ್ದೀನ್ ಅಹ್ಮದ್ ನದವಿ ಸಂಪುಟ-2, ಮುಹಾಜಿರೀನ್ ಭಾಗ-1, ಪುಟ-270, 275, ದಾರುಲ್ ಇಶಾಅತ್ ಉರ್ದು ಬಾಝಾರ್ ಕರಾಚಿ 2004, ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ-7, ಪುಟ-71, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003, ಮುಜಮುಲ್ ಬಲದಾನ್ ಸಂಪುಟ-2, ಪುಟ-157, ದಾರುಲ್ ಹಯಾಉತ್ತುರಾಸುಲ್ ಅರಬಿ ಬೈರೂತ್)

ಹಝ್ರತ್ ಮುಸ್‌ಅಬ್ ಆದ್ಯಕಾಲದಲ್ಲಿಯೇ ಮುಸ್ಲಿಮರಾದ ಗಣ್ಯ ಸಹಾಬಿಗಳಲ್ಲಿ ಒಬ್ಬರಾಗಿದ್ದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ದಾರೆ ಅರ್‌ಖಮ್‌ನಲ್ಲಿ ಪ್ರಚಾರ ಮಾಡುತಿರುವಾಗಲೇ ಹಝ್ರತ್ ಮಸ್‌ಅಬ್(ರ) ಅವರು ಇಸ್ಲಾಮ್ ಸ್ವೀಕರಿಸಿದ್ದರು. ಆದರೆ ಅವರು ತನ್ನ ತಾಯಿ ಮತ್ತು ತನ್ನ ಕೋಮಿನ ಜನರು ವಿರೋಧಿಸುವರೆಂಬ ಭಯದಿಂದ ಆ ವಿಷಯವನ್ನು ರಹಸ್ಯವಾಗಿರಿಸಿದ್ದರು. ಅವರು ರಹಸ್ಯವಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾಗುತ್ತಿದ್ದರು. ಒಮ್ಮೆ ಹಝ್ರತ್ ಮುಸ್‌ಅಬ್‌ರವರು ನಮಾಝ್ ಮಾಡುವುದನ್ನು ಉಸ್ಮಾನ್ ಬಿನ್ ತಲ್‌ಹ ನೋಡಿದಾಗ ಆ ವಿಷಯವನ್ನು ಅವರ ತಾಯಿಗೂ ಅವರ ಮನೆಯವರಿಗೂ ತಿಳಿಸಿದನು. ತಂದೆ ತಾಯಂದಿರು ಅವರನ್ನು ಬಂಧನದಲ್ಲಿರಿಸಿದರು. ಅವರು ಬಂಧನದಲ್ಲಿಯೇ ಇದ್ದರು ಅನಂತರ ಅಲ್ಲಿಂದ ತಪ್ಪಿಸಿಕೊಂಡು ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಿದರು. ಸ್ವಲ್ಪ ಸಮಯದ ನಂತರ ಕೆಲವು ವಲಸೆಗಾರರು ಅಬಿಸೀನಿಯಾದಿಂದ ಮಕ್ಕಕ್ಕೆ ಮರಳಿದಾಗ ಹಝ್ರತ್ ಮುಸ್‌ಅಬ್ ಸಹ ಅವರ ಜೊತೆಗೂಡಿ ಆಗಮಿಸಿದರು. ಅವರ ತಾಯಿ ಅವರ ಚಿಂತಾಜನಕ ಸ್ಥಿತಿಯನ್ನು ಕಂಡಾಗ ತನ್ನ ವಿರೋಧವನ್ನು ತ್ಯಜಿಸಿದರು ಮತ್ತು ಪುತ್ರನನ್ನು ಅವನಿಷ್ಟ ಪ್ರಕಾರ ಜೀವಿಸಲು ಬಿಟ್ಟರು. ಹಝ್ರತ್ ಮುಸ್‌ಅಬ್ ಎರಡು ಹಿಜ್‌ರತ್‌ಗಳನ್ನು ಮಾಡಿದರು. ಅವರು ಮೊದಲು ಅಬಿಸೀನಿಯಕ್ಕೆ ಮತ್ತು ಅನಂತರ ಮದೀನಕ್ಕೆ ಹಿಜ್‌ರತ್ ಮಾಡಿದರು. (ಅತ್ತಬಖಾತುಲ್‌ಕುಬ್ರ ಲಿಇಬ್ನೆ ಸಅದ್ ಭಾಗ-3, ಪುಟ-86, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990, ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ-5, ಪುಟ-175, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಹೇಳುತ್ತಾರೆ: ನಾನು ಮುಸ್‌ಅಬರನ್ನು ಅವರ ಸಮೃದ್ಧಿಯ ಕಾಲದಲ್ಲಿಯೂ ನೋಡಿದ್ದೆ. ಅವರು ಮುಸ್ಲಿಮರಾದ ನಂತರದ ಕಾಲದಲ್ಲಿಯೂ ನೋಡಿದ್ದೆ. ಇಸ್ಲಾಮಿಗೋಸ್ಕರ ಅವರು ಎಷ್ಟು ಕಷ್ಟ ಅನುಭವಿಸಿದರೆಂದರೆ ಅವರ ದೇಹದಿಂದ ಚರ್ಮವು ಹಾವಿನ ಪೊರೆ ಹೊರಗೆ ಹೋಗುವಂತೆ ಹೋಗುತ್ತಿತ್ತು ಮತ್ತು ಹೊಸ ಚರ್ಮ ಬರುತ್ತಿತ್ತು. (ಅಸ್ಸೀರತುನ್ನ ಬವೀಯ ಲಿಇಬ್ನೆ ಇಸ್ಹಾಖ್ ಪುಟ-230, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2004)

ಅವರು ಮಾಡಿದ ಬಲಿದಾನಗಳ ಮಟ್ಟ ಎಷ್ಟು ಉನ್ನತವಾಗಿತ್ತೆಂದರೆ ಆಶ್ಚರ್ಯಕರವಾಗಿತ್ತು. ಒಮ್ಮೆ ಮದೀನದಲ್ಲಿ ಹಝ್ರತ್ ಮುಸ್‌ಅಬ್ ಬಿನ್ ಉಮೈರ್ ರಝಿಯಲ್ಲಾಹು ಅನ್‌ಹು ಹಝ್ರತ್ ರಸೂಲ್ ಸಲ್ಲಲ್ಲಾಹು

ಅಲೈಹಿ ವಸಲ್ಲಮರನ್ನು ಭೇಟಿಯಾಗಲು ಆಗಮಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಹಾಬರ ಜೊತೆಗೆ ಕುಳಿತಿದ್ದರು. ಆಗ ಹಝ್ರತ್ ಮುಸ್‌ಅಬರ ಬಟ್ಟೆಗಳಲ್ಲಿ ಚರ್ಮ ತುಂಡುಗಳ ತೇಪೆ ಹಾಕಲಾಗಿತ್ತು. ಅವರು ಮುಸ್ಲಿಮ್ ಆಗುವುದಕ್ಕೆ ಮುಂಚೆ ಅವರು ಹೇಗೆ ಐಶ್ವರ್ಯದಿಂದ ಇರುತ್ತಿದ್ದರು ಅನಂತರ ಮುಸ್ಲಿಮ್ ಆದಾಗ ಅವರ ಪರಿಸ್ಥಿತಿ ಹೇಗಾಯಿತು. ಅವರ ಬಟ್ಟೆಗಳ ಮೇಲೆ ಚರ್ಮದ ತುಂಡುಗಳ ತೇಪೆ ಹಾಕಲಾಗಿತ್ತು. ಸಹಾಬರವರು ಹಝ್ರತ್ ಮುಸ್‌ಅಬ್(ರ) ಅವರನ್ನು ಕಂಡು ತಾವೆಲ್ಲರು ನಿಸ್ಸಹಾಯಕರಾಗಿದ್ದಾರೆ ಎಂದು ತಮ್ಮ ತಲೆಗಳನ್ನು ಕೆಳಗೆ ಹಾಕಿಕೊಂಡರು. ಹಝ್ರತ್ ಮುಸ್‌ಅಬ್ ಸಲಾಮ್ ಹೇಳಿದಾಗ ಪೈಗಂಬರರು ಅದಕ್ಕೆ ಉತ್ತರ ನೀಡಿದರು ಮತ್ತು ಅವರನ್ನು ಸ್ತುತಿಸಿ ಹೇಳಿದರು – ಅಲ್‌ಹಮ್ದುಲಿಲ್ಲಾಹ್, ಲೌಕಿಕ ಜನರಿಗೆ ಅವರು ಆಶಿಸುವ ಲೌಕಿಕ ಲಾಭಗಳು ದೊರಕಲಿ. ನಾನು ಮುಸ್‌ಅಬ್‌ರನ್ನು ಮಕ್ಕದಲ್ಲಿ ನೋಡಿದಾಗ ಅವರಿಗಿಂತ ಮಿಗಿಲಾಗಿ ಪ್ರಭಾವಶಾಲಿ ಮತ್ತು ಐಶ್ವರ್ಯವಂತ ಬೇರೆ ಯಾರೂ ಇರಲಿಲ್ಲ. ಅವರು ತಮ್ಮ ತಂದೆ ತಾಯಂದಿರ ಅತ್ಯಂತ ಪ್ರಿಯ ಪುತ್ರರಾಗಿದ್ದರು. ಆದರೆ ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಬಗ್ಗೆ ಅವರಿಗಿರುವ ಪ್ರೀತಿ ಅವರನ್ನು ಈ ಸ್ಥಿತಿಗೆ ತಲಪಿಸಿತು. ಅವರು ಎಲ್ಲವನ್ನೂ ಅಲ್ಲಾಹನಗೋಸ್ಕರ ಮತ್ತು ಅವನ ಸಂಪ್ರೀತಿಗೋಸ್ಕರ ತ್ಯಜಿಸಿರುವರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–03, ಪುಟ–86, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಮುಸ್‌ಅಬ್(ರ) ಅವರನ್ನು ಕಂಡಾಗ ಅವರ ಐಶ್ವರ್ಯದಿಂದ ಸಾಗಿಸುತ್ತಿದ್ದ ಜೀವನವನ್ನು ನೆನಪಿಸಿಕೊಂಡು ಅಳತೊಡಗಿದರು. ಅವರ ಮುಂಚಿನ ಸ್ಥಿತಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ನೆನಪಾಯಿತು. ಅವರು ಹೇಗೆ ಬಲಿದಾನ ನೀಡುತ್ತಿದ್ದಾರೆ ಎಂದು.

ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಮದೀನದ ಮಸ್‌ಜಿದ್‌ನಲ್ಲಿ ಕುಳಿತಿದ್ದಾಗ ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಆಗಮಿಸಿದರು. ಅವರ ದೇಹದ ಮೇಲೆ ಒಂದು ಚಾದರವಿತ್ತು. ಅದಕ್ಕೆ ಚರ್ಮದ ತುಂಡುಗಳ ತೇಪೆ ಹಾಕಲಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ನೋಡಿದಾಗ ಅವರ ಹಿಂದಿನ ಐಶ್ವರ್ಯದ ಸ್ಥಿತಿಯನ್ನು ನೆನಪಿಸಿ ಅಳಲು ಪ್ರಾರಂಭಿಸಿದರು. ಅವರ ಹಿಂದಿನ ಸ್ಥಿತಿ ಮತ್ತು ಇಂದಿನ ಸ್ಥಿತಿಯನ್ನು ಸ್ಮರಿಸಿದರು. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿಮ್ಮ ಸ್ಥಿತಿ ಆಗ ಹೇಗಿರುವುದು. ನಿಮ್ಮಲ್ಲಿ ಒಬ್ಬನು ಬೆಳಗ್ಗೆ ಒಂದು ಪೋಷಾಕು ಧರಿಸಿ ಅನಂತರ ಸಾಯಂಕಾಲ ಇನ್ನೊಂದು ಪೋಷಾಕು ಧರಿಸುವನು. ಎಂದರೆ ನಿಮಗೆ ಅಷ್ಟು ಐಶ್ವರ್ಯ ಸ್ಥಿತಿ ಲಭಿಸುವುದು. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು, ನಿಮ್ಮ ಮುಂದೆ ಬಟ್ಟಲು ಆಹಾರ ಪದಾರ್ಥ ತರುವಾಗ ಇನ್ನೊಂದು ಬಟ್ಟಲು ಅಲ್ಲಿಂದ ಎತ್ತಲ್ಪಡುವುದು. ಎಂದರೆ ವಿವಿಧ ರೀತಿಯ ತಿಂಡಿ ಪದಾರ್ಥಗಳು ಸರಬರಾಜು ಮಾಡಲಾಗುವುದು. ಇಂದಿನ ಹಾಗೆ ವಿವಿಧ ತಿನಿಸುಗಳ ವರಸೆ ನಡೆಸಲ್ಪಡುವುದು. ನೀವು ನಿಮ್ಮ ಮನೆಗಳಲ್ಲಿ ಪರದೆ ಹಾಕುವಿರಿ. ಕಅಬಕ್ಕೆ ಪರದೆ ಹೊದಿಸುವ ಹಾಗೆ. ಬಹಳ ಬೆಲೆಬಾಳುವ ಪರದೆಗಳನ್ನು ಬಳಸಲಾಗುವುದು ಎಂದು ಹೇಳಿದರು. ಇವು ಸಂಪೂರ್ಣವಾಗಿ ಇಂದಿನ ಕಾಲದ ದೃಶ್ಯಗಳೇ ಆಗಿವೆ ಅಥವಾ ಅನಂತರ ಮುಸ್ಲಿಮರಿಗೆ ದೊರೆತ ಸುಖ ಸೌಲಭ್ಯಗಳ ವರ್ಣನೆ ಆಗಿವೆ. ಆಗ ಸಹಾಬರು ಕೇಳಿದರು: ಯಾ ರಸೂಲುಲ್ಲಾಹ್, ಆಗ ನಾವು ಈಗಿನ ಕಾಲಕ್ಕಿಂತ ಉತ್ತಮರಾಗುವೆವೋ, ಆಗ ನಮಗೆ ಆರಾಧನೆ ಮಾಡಲು ಧಾರಾಳ ಬಿಡುವು ದೊರಕುವುದೇ? ನಮಗೆ ಕಷ್ಟಪಟ್ಟು ದುಡಿಯುವ ಆವಶ್ಯಕತೆ ಇಲ್ಲದಾಗುವುದೇ? ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಇಲ್ಲ, ನಿಮ್ಮ ಇಂದಿನ ದಿನಗಳು ಆ ಕಾಲದ ದಿನಗಳಿಗಿಂತ ಉತ್ತಮವಾಗಿರುವುದು. (ಸನನ್ನ ತಿರ್‌ಮಿಝಿ ಅಬ್ವಾಬುಸ್ಸಫತುಲ್ ಖಿಯಾಮ ಹದೀಸ್–2476) ನಿಮ್ಮ ಸ್ಥಿತಿ, ನಿಮ್ಮ ಆರಾಧನೆಗಳು, ನಿಮ್ಮ ಆಧ್ಯಾತ್ಮಿಕ ಮಟ್ಟ ಆ ಕಾಲದಕ್ಕಿಂತ ಉತ್ತಮವಾಗಿದೆ. ಮುಂದೆ ಸುಖ ಸೌಲಭ್ಯ ಗಳಿಸುವವರಿಗಿಂತ ನಿಮ್ಮ ಇಂದಿನ ಸ್ಥಿತಿ ಉತ್ತಮವಾಗಿದೆ.

ಸೀರತ್ ಖಾತಮುನ್ನಬಿಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಅವರು ಅಬಿಸೀನಿಯದ ಹಿಜ್‌ರತ್ ಬಗ್ಗೆ ಬರೆದಿದ್ದಾರೆ. ಇದರ ಬಗ್ಗೆ ಮುಂಚೆ ಬೇರೆ ಸಹಾಬರವರ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿದ್ದೇನೆ. ಈಗ ಸಂಕ್ಷಿಪ್ತವಾಗಿ ಪ್ರಸ್ತಾಪಿಸುವೆನು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಆದೇಶದ ಮೇರೆಗೆ 5ನೇ ನಬವಿ ರಜಬ್ ಮಾಸದಲ್ಲಿ 11 ಪುರುಷರು ಹಾಗೂ 4 ಮಹಿಳೆಯರು ಅಬಿಸೀನಿಯದ ಕಡೆ ಹಿಜ್‌ರತ್ ಮಾಡಿದ್ದರು. ಅವರಲ್ಲಿ ಹಝ್ರತ್ ಮುಸ್‌ಅಬ್(ರ) ಕೂಡ ಒಬ್ಬರಾಗಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಬರೆಯುತ್ತಾರೆ ಒಂದು ಆಶ್ಚರ್ಯದ ವಿಷಯವೇನೆಂದರೆ ಇಸ್ಲಾಮ್ ಧರ್ಮದ ಆರಂಭದ ಕಾಲದಲ್ಲಿ ಇಸ್ಲಾಮ್ ಸ್ವೀಕರಿಸುವವರ ಸಂಖ್ಯೆ ಖುರೈಶಿನ ಐಶ್ವರ್ಯವಂತ ಗೋತ್ರದವರಾಗಿದ್ದರು ಮತ್ತು ದುರ್ಬಲರು ಬಹಳ ಕಡಿಮೆ ಪ್ರಮಾಣದಲ್ಲಿ ಕಂಡು ಬರುತ್ತೆದೆ. ಇದರಿಂದ ಎರಡು ವಿಷಯಗಳು ತಿಳಿದು ಬರುತ್ತದೆ ಮೊದಲನೇಯದಾಗಿ ಈ ಐಶ್ವರ್ಯವಂತ ಗೋತ್ರಗಳು ಸಹ ಖುರೈಶರ ದೌರ್ಜನ್ಯದಿಂದ ಉಳಿದಿರಲಿಲ್ಲ. ಎರಡನೇಯದಾಗಿ ದುರ್ಬಲರು ಉದಾಹರಣೆಗೆ ಗುಲಾಮರು ಮುಂತಾದವರ ಪರಿಸ್ಥಿತಿಯು ಹೇಗಿತ್ತು ಎಂದರೆ ಅವರು ಹಿಜ್ರತ್ ಮಾಡಲು ಅನರ್ಹರಾಗಿದ್ದರು. ಏನೇ ಇರಲಿ ಮಕ್ಕದ ಖುರೈಶರಿಗೆ ಅವರ ಹಿಜ್ರತ್‌ನ ಬಗ್ಗೆ ತಿಳಿದು ಬಂದಾಗ ಅವರೆಲ್ಲರು ಈ ಬೇಟೆಯು ತಮ್ಮ ಕೈಯಿಂದ ತಪ್ಪಿಕೊಳ್ಳುತ್ತಿದೆ ಎಂದು ಕೋಪಗೊಂಡರು. ಅನಂತರ ಅವರು ಆ ಮುಹಾಜಿರೀನರನ್ನು ಹಿಂಬಾಲಿಸಿದರು ಆದರೆ ಅವರು ದಡ ತಲುಪುವ ತನಕ ಅವರ ಜಹಾಜು ಹೊರಟಿತ್ತು. ಈ ಜನರು ಹಿಂದಿರುಗಿದರು. ಹಬ್‌ಶಕ್ಕೆ ತಲುಪಿದ ನಂತರ ಮುಸ್ಲಿಮರಿಗೆ ಶಾಂತಿ ಲಭಿಸಿತು ಮತ್ತು ಖುರೈಶರ ದೌರ್ಜನ್ಯದಿಂದ ಬಿಡುಗಡೆ ಹೊಂದಿದರು. (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಎಂ. ಎ ಪುಟ— 146–147)

ಬೈಅತೆ ಅಖಬ ಊಲಾ (ಪ್ರಥಮ ಬೈಅತ್)ನಲ್ಲಿ ಭಾಗವಹಿಸಲು ಮದೀನದಿಂದ ಹನ್ನೆರಡು ಮಂದಿ ಆಗಮಿಸಿ ಬೈಅತ್ ಮಾಡಿದ್ದರು. ಆ ಜನರು ಮದೀನಕ್ಕೆ ಮರಳುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಸ್‌ಅಬ್ ಬಿನ್ ಉಮೈರರನ್ನು ಅವರ ಜೊತೆಗೆ ಕಳುಹಿಸಿದರು. ಪವಿತ್ರ ಖುರ್‌ಆನ್ ಕಲಿಸಲು ಮತ್ತು ಇಸ್ಲಾಮಿನ ಉಪದೇಶಗಳನ್ನು ವಿವರಿಸಲು ಅವರನ್ನು ಕಳುಹಿಸಲಾಗಿತ್ತು. ಮದೀನದಲ್ಲಿ ಅವರು ಖಾರಿ ಮತ್ತು ಉಸ್ತಾದ್ ಎಂದು ಪ್ರಸಿದ್ಧರಾದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–5, ಪುಟ–175–176 ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003, ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್ ಭಾಗ–4, ಪುಟ–37, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2010, ಅಸ್ಸೀರತುನ್ನಬವೀಯ ಲಿಇಬ್ನೆ ಹಶ್ಶಾಮ್ ಪುಟ–199, ದಾರ್ ಇಬ್ನೆ ಜಝ್ಮ್ ಬೈರೂತ್ ಲೆಬನಾನ್ 2009)

ಇನ್ನೊಂದು ವರದಿಯ ಪ್ರಕಾರ ಔಸ್ ಹಾಗೂ ಖಝ್‌ರಜ್ ಗೋತ್ರದ ಅನ್ಸಾರ್‌ಗಳು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿ ಹೇಳಿದರು ಖುರ್‌ಆನ್ ಕಲಿಸುವುದಕ್ಕಾಗಿ ಯಾರನ್ನಾದರು ನಮ್ಮೊಂದಿಗೆ ಕಳುಹಿಸಿಕೊಡಿ ಎಂದು. ಆದ್ದರಿಂದ ಹುಝೂರ್(ಸ) ಅವರು ಹಝ್ರತ್ ಮಸ್‌ಅಬ್ ಬಿನ್ ಉಮೈರ್(ರ) ಅವರನ್ನು ಕಳುಹಿಸಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–1, ಪುಟ–171, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಮುಸ್‌ಅಬ್ ಮದೀನದಲ್ಲಿ ಹಝ್ರತ್ ಅಸ್‌ವದ್ ಬಿನ್ ಝುರಾರರ ಮನೆಯಲ್ಲಿ ತಂಗಿದರು. ಅವರು ನಮಾಝ್‌ಗಳ ಇಮಾಮತ್ ಸಹ ನಿರ್ವಹಿಸುತ್ತಿದ್ದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್ ಪುಟ–199, ದಾರ್ ಇಬ್ನೆ ಜಝುಮ್ ಬೈರೂತ್ 2009)

ಸ್ವಲ್ಪ ಕಾಲದ ನಂತರ ಹಝ್ರತ್ ಮುಸ್‌ಅಬ್ ತನ್ನ ವಾಸವನ್ನು ಹಝ್ರತ್ ಸಅದ್ ಬಿನ್ ಮುಆಝುರ(ರ) ಮನೆಗೆ ಬದಲಾಯಿಸಿದರು. (ಸೀರತುಸ್ಸಹಾಬ, ಶಾಹ್ ಮುಯೀನುದ್ದೀನ್ ಅಹ್ಮದ್ ನದವಿ ಸಂಪುಟ–2, ಮುಹಾಜಿರೀನ್ ಭಾಗ–1, ಪುಟ–272, ದಾರುಲ್‌ಇಶಾಅತ್ ಉರ್ದು ಬಝಾರ್ ಕರಾಚಿ 2004)

ಹಝ್ರತ್ ಬರಾಅ ಬಿನ್ ಆಝಿಬ್ ವರದಿ ಮಾಡುತ್ತಾರೆ: ಮದೀನಕ್ಕೆ ಹಿಜ್‌ರತ್ ಮಾಡಿದ ಸಹಾಬರಲ್ಲಿ ಮೊದಲಿಗರು ಮುಸ್‌ಅಬ್ ಬಿನ್ ಉಮೈರ್ ಮತ್ತು ಇಬ್ನು ಉಮ್ಮಿ ಮಖ್‌ತೂಮ್ ಆಗಿದ್ದರು. ಮದೀನಕ್ಕೆ ಆಗಮಿಸಿದ ನಂತರ ಅವರಿಬ್ಬರೂ ನಮಗೆ ಪವಿತ್ರ ಖುರ್‌ಆನ್ ಕಲಿಸಲು ಪ್ರಾರಂಭಿಸಿದರು. ಅನಂತರ ಅಮ್ಮಾರ್(ರ), ಬಿಲಾಲ್(ರ) ಮತ್ತು ಸಅದ್(ರ) ಅವರು ಬಂದರು ಮತ್ತು ಹಝ್ರತ್ ಉಮರ್(ರ) ಸಹಾಬರವರನ್ನು ಜೊತೆಗೆ ಕರೆದುಕೊಂಡು ಬಂದರು. ಹಝ್ರತ್ ಬರಾಅ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಆಗಮಿಸಿದಾಗ ಮದೀನದ ನಿವಾಸಿಗಳಿಗೆ ಎಷ್ಟು ಸಂತೋಷವಾಯಿತೆಂದರೆ ಅಂತಹ ಸಂತೋಷ ಬೇರೆ ಯಾವಾಗಲೂ ಅವರಲ್ಲಿ ನಾನು ಕಂಡಿರಲಿಲ್ಲ. ಬಾಲಕ ಬಾಲಿಕೆಯರೂ ಹೇಳುತ್ತಿದ್ದರು ಆ ಮಹಾನುಭಾವರು ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಅವರು ನಮ್ಮ ಬಳಿ

ಆಗಮಿಸಿದ್ದಾರೆ. (ಸಹೀಹ್ ಅಲ್‌ಬುಖಾರಿ ಕಿತಾಬ್ ತಫ್‌ಸೀರುಲ್ ಖುರ್‌ಆನ್, ಭಾಗ ಸೂರತುಲ್ ಆಲ, ಹದೀಸ್–4941)

ಸೀರತ್ ಖಾತಮುನ್ನಬಿಯ್ಯೀನ್ ಗ್ರಂಥದಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಹಝ್ರತ್ ಮುಸ್‌ಅಬ್ ಬಿನ್ ಉಮ್ಮೈರ್ ಬಗ್ಗೆ ಬರೆಯುತ್ತಾರೆ:

"ದಾರು ಅರ್‌ಖಮ್‌ನಲ್ಲಿ ಮುಸ್ಲಿಮರಾದ ಹಝ್ರತ್ ಮುಸ್‌ಅಬ್ ಪ್ರಥಮವಾಗಿ ವಿಶ್ವಾಸ ಸ್ವೀಕರಿಸಿದವರಲ್ಲಿ ಸೇರಿದ್ದರೆಂದು ಗಣಿಸಲ್ಪಡುತ್ತಾರೆ. ಅವರ ಪೈಕಿ ಹೆಚ್ಚು ಪ್ರಸಿದ್ಧರಾದವರು ಸಹ ಹಝ್ರತ್ ಮುಸ್‌ಅಬ್‌ರೇ ಆಗಿದ್ದರು. ಅವರು ದೃಢಗಾತ್ರ ಹೊಂದಿದವರೂ ಸುಂದರನೂ ಆಗಿದ್ದರು. ಅವರು ತನ್ನ ಕುಟುಂಬದಲ್ಲಿ ಅತ್ಯಂತ ಪ್ರೀತಿಸಲ್ಪಟ್ಟವರಾಗಿದ್ದರು. ಅವರನ್ನು ಯಸ್‌ರಿಬ್‌ಗೆ (ಮದೀನಕ್ಕೆ) ಪ್ರಥಮ ಪ್ರಚಾರಕರಾಗಿ ಕಳುಹಿಸಲಾಗಿತ್ತು. ಅವರ ಮೂಲಕ ಮದೀನದಲ್ಲಿ ಇಸ್ಲಾಮ್ ಹರಡಿತು. (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ. ಎ, ಪುಟ–129)

ಇನ್ನೊಂದು ಜೀವನ ಚರಿತ್ರೆಯ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ. ಮದೀನದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಿಜ್‌ರತ್‌ಗೆ ಮೊದಲು ಸಅದ್ ಬಿನ್ ಖೈಸಮರ ಮನೆಯಲ್ಲಿ ಪ್ರಥಮವಾಗಿ ಜುಮುಅ ನಮಾಝ್ ನಿರ್ವಹಿಸಿದವರು ಹಝ್ರತ್ ಮುಸ್‌ಅಬ್ ಆಗಿದ್ದರು. ಹಝ್ರತ್ ಮುಸ್‌ಅಬ್(ರ) ಬೈಅತೆ ಉಖಬಾ ಸಮಯಕ್ಕಿಂತ ಮುಂಚೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಮದೀನದಲ್ಲಿ ಜುಮುಅ ನಮಾಝ್ ನಿರ್ವಹಿಸಲು ಅಪ್ಪಣೆ ಕೇಳಿದರು. ಹುಝೂರ್(ಸ) ಅದಕ್ಕೆ ಅಪ್ಪಣೆ ನೀಡಿದರು. ಹಝ್ರತ್ ಮುಸ್‌ಅಬ್ ಬಿನ್ ಉಮ್ಮೈರ್(ರ) ಅವರು ಮದೀನದಲ್ಲಿ ಹಝ್ರತ್ ಸಅದ್ ಬಿನ್ ಖೈಸಮ(ರ) ಅವರ ಮನೆಯಲ್ಲಿ ಮೊದಲ ಬಾರಿಗೆ ಜುಮುಅ ನಮಾಝ್ ನಿರ್ವಹಿಸಿದರು. ಇದರಲ್ಲಿ ಮದೀನದ ಹನ್ನೆರಡು ಜನ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಅವರು ಒಂದು ಆಡನ್ನು ಸಹ ವಧಿಸಿದರು. ಹಝ್ರತ್ ಮುಸ್‌ಅಬ್ ಬಿನ್ ಉಮ್ಮೈರ್(ರ) ಇಸ್ಲಾಮಿನಲ್ಲಿ ಮೊಟ್ಟ ಮೊದಲಿಗೆ ಜುಮುಅ ನಮಾಝನ್ನು ನಿರ್ವಹಿಸಿದರು. ಆದರೆ ಇನ್ನೊಂದು ವರದಿಯ ಪ್ರಕಾರ ಹಝ್ರತ್ ಅಬೂ ಉಮಾಮ ಅಸ್‌ಅದ್ ಬಿನ್ ಝುರಾರ(ರ) ಅವರು ಜುಮುಆ ನಮಾಜ್ ನಿರ್ವಸಿದ್ದಾರೆ ಎಂದು ವರದಿ ಆಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–87–88, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲಡಬನಾನ್ 1990, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–l, ಪುಟ–171, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಮುಸ್‌ಅಬ್(ರ) ಅವರು ಮೊಟ್ಟ ಮೊದಲ ಪ್ರಚಾರಕರಾಗಿದ್ದರು. ಹಝ್ರತ್ ಮುಸ್‌ಅಬ್(ರ) ಹಝ್ರತ್ ಅಸ್‌ಅದ್ ಬಿನ್ ಝುರಾರ(ರ) ಅವರೊಂದಿಗೆ ಅನ್‌ಸಾರ್‌ಗಳ ವಿವಿಧ ಬಡಾವಣೆಗಳಲ್ಲಿ ಪ್ರಚಾರಕ್ಕೊಸ್ಕರ ಹೋಗುತ್ತಿದ್ದರು. ಹಝ್ರತ್ ಮುಸ್‌ಅಬ್‌ರ ಪ್ರಚಾರದ ಕಾರಣದಿಂದ ಅನೇಕ ಸಹಾಬರು ಮುಸ್ಲಿಮರಾದರು. ಅವರಲ್ಲಿ ಪ್ರಮುಖರು ಹಝ್ರತ್ ಸಅದ್ ಬಿನ್ ಮುಆಝ್, ಹಝ್ರತ್ ಉಬಾದ್ ಬಿನ್ ಬಶರ್, ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ, ಹಝ್ರತ್ ಉಸೈದ್ ಬಿನ್ ಹುಝ್ಯೈರ್ ಮೊದಲಾದವರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್ ಪುಟ–200, ಬಾಗ–1, ದಾರ್ ಇಬ್ನೆ ಜಝುವ್ ಬೈರೂತ್ 2009, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–321, 326, 338, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಮುಸ್‌ಅಬ್(ರ) ಅವರ ತಬ್ಲೀಗಿನ ಪರಿಶ್ರಮಗಳನ್ನು ವಿವರಿಸುತ್ತ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಅವರು ಹೇಳುತ್ತಾರೆ:

"ಮಕ್ಕದಿಂದ ಹೊರಡುವಾಗ ಆ ಹನ್ನೆರಡು ನವ ಮುಸ್ಲಿಮರು ಪ್ರವಾದಿ(ರ) ಅವರ ಬಳಿ ನಮಗೆ ಓರ್ವ ವ್ಯಕ್ತಿಯನ್ನು ನಮ್ಮೊಂದಿಗೆ ಇಸ್ಲಾಮ್ ಧರ್ಮವನ್ನು ಬೋಧಿಸಲು ಕಳುಹಿಸಿಕೊಡಿ ಎಂದು ಕೇಳಿಕೊಂಡಾಗ ಪ್ರವಾದಿ ಮುಹಮ್ಮದ್(ಸ) ಅವರು ಹಝ್ರತ್ ಮುಸ್‌ಅಬ್(ರ) ಅವರನ್ನು ಕಳುಹಿಸಿದರು. ಅವರು ಬನೂ ಅಬ್ದುದ್ದಾರ್‌ನ ಓರ್ವ ನಿಷ್ಠಾವಂತ ಯುವಕರಾಗಿದ್ದರು. ಇಸ್ಲಾಮಿನ ಪ್ರಚಾರಕರನ್ನು ಅಂದಿನ ಕಾಲದಲ್ಲಿ ಖಾರಿ ಎಂದು ಕರೆಯುತ್ತಿದ್ದರು ಈ ಹೆಸರಲ್ಲೇ ಪ್ರಸಿದ್ಧರಾಗಿದ್ದರು. ಏಕೆಂದರೆ ಅವರ ಕೆಲಸ ಕೇವಲ ಪವಿತ್ರ ಖುರ್‌ಆನನ್ನು ಪಠಿಸುವುದಾಗಿತ್ತು. ಏಕೆಂದರೆ ಇದು ಇಸ್ಲಾಮ್ ಧರ್ಮದ ಬೋಧನೆಯ ಉತ್ತಮ ವಿಧಾನವಾಗಿತ್ತು. ಹೀಗೆ ಹಝ್ರತ್ ಮುಸ್‌ಅಬ್(ರ) ಯಸ್‌ರಬ್‌ನಲ್ಲಿ ಪ್ರಸಿದ್ಧರಾದರು. ಮುಸ್‌ಅಬ್(ರ) ಮದೀನಕ್ಕೆ ತಲುಪಿ ಅಸ್‌ಅದ್ ಬಿನ್ ಝುರಾರ(ರ) ಅವರ ಮನೆಯಲ್ಲಿ ತಂಗಿದರು ಇವರು ಮದೀನದಲ್ಲಿ ಮೊಟ್ಟಮೊದಲು ಮುಸ್ಲಿಮರಾಗಿದ್ದರು ಮತ್ತು ನಿಷ್ಠಾವಂತ ಹಾಗೂ ಹಿರಿಯ ಗಣ್ಯವ್ಯಕ್ತಿ ಆಗಿದ್ದರು. ಈ ಮನೇಯನ್ನೆ ತಮ್ಮ ಪ್ರಚಾರದ ಕೇಂದ್ರವನ್ನಾಗಿಸಿದರು. ಮತ್ತು ತಮ್ಮ ಕಾರ್ಯದಲ್ಲಿ ನಿರತರಾದರು. ಹೀಗೆ ಅಲ್ಲಿ ಮುಸ್ಲಿಮರಿಗೆ ಒಗ್ಗಟ್ಟಾಗಿ ಜೀವನ ಸಾಗಿಸಲು ಸೌಭಾಗ್ಯ ಲಭಿಸಿತು. ಆದ್ದರಿಂದ ಅಸ್‌ಅದ್ ಬಿನ್ ಝುರಾರ(ರ) ಅವರ ಮಾರ್ಗದರ್ಶನದ ಮೆರೆಗೆ ಪ್ರವಾದಿ(ಸ) ಅವರು ಮುಸ್‌ಅಬ್(ರ) ಅವರನ್ನು ಜುಮುಅ ನಮಾಝ್ ನಿರ್ವಹಿಸಲು ಉಪದೇಶ ನೀಡಿದರು. ಹೀಗೆ ಮುಸ್ಲಿಮರ ಜೊತೆಗೂಡಿ ಜೀವನ ಸಾಗಿಸಲು ಪ್ರಾರಂಭಿಸಿದರು. ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮುಸ್‌ಅಬ್‌ರವರ ತಬ್ಲೀಗ್ ಕಾರಣದಿಂದ ಮದೀನದ ಮನೆ ಮನೆಗಳಲ್ಲಿ ಇಸ್ಲಾಮಿನ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಔಸ್ ಮತ್ತು ಖಝ್‌ರಜ್ ಗೋತ್ರಗಳ ಜನರು ಬೇಗ ಬೇಗನೆ ಮುಸ್ಲಿಮರಾಗ ತೊಡಗಿದರು. ಕೆಲವು ಗೋತ್ರಗಳು ಪೂರ್ಣವಾಗಿ ಒಂದೇ ದಿನದಲ್ಲಿ ಇಸ್ಲಾಮ್ ಧರ್ಮಕ್ಕೆ ಸೇರಿದುವು. ಬನೂ ಅಬ್ದುಲ್ ಅಶ್‌ಹಲ್ ಗೋತ್ರವು ಒಮ್ಮೆಲೇ ಮುಸ್ಲಿಮರಾದ ಗೋತ್ರವಾಗಿತ್ತು. ಇದು ಅನ್‌ಸಾರ್‌ಗಳ ಔಸ್ ಗೋತ್ರದ ಒಂದು ಮುಖ್ಯ ಭಾಗವಾಗಿತ್ತು. ಅದರ ಮುಖಂಡರ ಹೆಸರು ಸಅದ್ ಬಿನ್ ಮುಆಝ್ ಎಂದಾಗಿತ್ತು. ಅವರು ಬನೂ ಅಬ್ದುಲ್ ಅಶ್‌ಹಲ್‌ನ ಸರ್ವೋನ್ನತ ಮುಖಂಡರಾಗಿದ್ದರಲ್ಲದೆ ಔಸ್ ಗೋತ್ರದ ನಾಯಕರೂ ಆಗಿದ್ದರು. ಮದೀನದಲ್ಲಿ ಇಸ್ಲಾಮ್ ಬಗ್ಗೆ ಚರ್ಚೆ ಪ್ರಾರಂಭವಾದಾಗ ಸಅದ್ ಬಿನ್ ಮುಆಝ್‌ಗೆ ಅದು ಇಷ್ಟವಾಗಲಿಲ್ಲ. ಅವರು ಅದನ್ನು ತಡೆಗಟ್ಟಲು ಇಚ್ಛಿಸಿದರು (ಮುಸ್ಲಿಮರಾಗುವ ಮೊದಲು ಸಅದ್ ಬಿನ್ ಮುಆಝ್ ದೊಡ್ಡ ವಿರೋಧಿಯಾಗಿದ್ದರು). ಅವರಿಗೆ ಅಸ್‌ಅದ್ ಬಿನ್ ಝುರಾರರೊಂದಿಗೆ ಬಹಳ ಸಮೀಪದ ಸಂಬಂಧವಿತ್ತು. ಅವರು ಒಬ್ಬರಿನ್ನೊಬ್ಬರ ಚಿಕ್ಕಮ್ಮನ ಮಕ್ಕಳಾಗಿದ್ದರು. ಅಸ್‌ಅದ್ ಬಿನ್ ಝುರಾರ ಮುಸ್ಲಿಮರಾಗಿದ್ದರು. ಆದುದರಿಂದ ಸಅದ್ ಬಿನ್ ಮುಆಝ್ ನೇರವಾಗಿ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದರಿಂದ ದೂರ ಸರಿದು ಪರಸ್ಪರ ವೈಮನಸ್ಸು ಉಂಟಾಗದಂತೆ ನೋಡಿಕೊಂಡಿದ್ದರು. ಆದುದರಿಂದ ಅವರು ತನ್ನ ಇನ್ನೊಬ್ಬ ಸಂಬಂಧಿಕನಾದ ಉಸೈದ್ ಬಿನ್ ಅಲ್ ಹುಝ್ಯೈರ್‌ರೊಂದಿಗೆ ಹೇಳಿದರು: ಅಸ್‌ಅದ್ ಬಿನ್ ಝುರಾರ ಕಾರಣ ನನಗೆ ಮುಜುಗರವಾಗುತ್ತದೆ. ನೀವು ಹೋಗಿ ಮುಸ್‌ಅಬ್‌ರನ್ನು ತಡೆಯಿರಿ. ನಮ್ಮ ಜನರ ಮಧ್ಯೆ ಈ ಅಧರ್ಮ ಹಬ್ಬಿಸಬೇಡ ಎಂದು ಹೇಳಿರಿ. ಅಸ್‌ವದ್‌ನೊಂದಿಗೆ ಸಹ ಅವನು ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿರಿ. ಉಸೈದ್, ಅಬ್ದುಲ್ ಅಶ್‌ಹಲ್ ಗೋತ್ರದ ಗಣ್ಯ ಮುಖಂಡರಲ್ಲಿ ಒಬ್ಬರಾಗಿದ್ದರು. ಸಅದ್ ಬಿನ್ ಮುಆಝ್ ನಂತರ ಉಸೈದರಿಗೂ ತನ್ನ ಗೋತ್ರದಲ್ಲಿ ಬಹಳ ಪ್ರಭಾವವಿತ್ತು. ಹಾಗೆ ಸಅದ್ ಹೇಳಿದ ಪ್ರಕಾರ ಉಸೈದ್, ಮುಸ್‌ಅಬ್ ಮತ್ತು ಅಸ್‌ಅದರ ಬಳಿಗೆ ಹೋದರು ಮತ್ತು ಮುಸ್‌ಅಬ್‌ರೊಂದಿಗೆ ಸಿಟ್ಟಿನಿಂದ ಹೇಳಿದರು: ನೀವು ನಮ್ಮ ಜನರನ್ನು ಧರ್ಮ ಭ್ರಷ್ಟರನ್ನಾಗಿ ಏಕೆ ಮಾಡುತ್ತಿರುವಿರಿ. ಹಾಗೆ ಮಾಡುವುದರಿಂದ ದೂರ ಸರಿಯದಿದ್ದರೆ ಒಳ್ಳೆಯದಾಗದು ಎಂದು ಹೇಳಿದರು. ಮುಸ್‌ಅಬ್ ಉತ್ತರ ಹೇಳುವ ಮೊದಲು ಅಸ್‌ಅದ್ ಮೆಲ್ಲಗೆ ಮುಸ್‌ಅಬ್‌ರೊಂದಿಗೆ ಹೇಳಿದರು, ಈ ವ್ಯಕ್ತಿ ತನ್ನ ಗೋತ್ರದ ಪ್ರಭಾವಶಾಲಿ ಮುಖಂಡರಾಗಿದ್ದಾರೆ. ಅವರೊಂದಿಗೆ ಮೃದುವಾಗಿಯೂ ಪ್ರೀತಿಯಿಂದಲೂ ಮಾತನಾಡಿರಿ. ಆಗ ಮುಸ್‌ಅಬ್ ಬಹಳ ಆದರ ಭಾವದಿಂದಲೂ ಪ್ರೀತಿಯಿಂದಲೂ ಉಸೈದರೊಂದಿಗೆ ಹೇಳಿದರು: ತಾವು ಸಿಟ್ಟುಗೊಳ್ಳಬೇಡಿರಿ. ದಯಮಾಡಿ ಸ್ವಲ್ಪ ಹೊತ್ತು ಇಲ್ಲಿ ಕುಳಿತುಕೊಂಡು ತಂಪಾದ ಹೃದಯದೊಂದಿಗೆ ನಮ್ಮ ಮಾತುಗಳನ್ನು ಆಲಿಸಿರಿ. ಅನಂತರ ನೀವು ನಿಮ್ಮ ಅಭಿಪ್ರಾಯ ಹೇಳಿರಿ. ಉಸೈದ್ ಅವರ ಮಾತು ಸರಿ ಎಂದು ಗ್ರಹಿಸಿ ಕುಳಿತುಕೊಂಡರು. ಅವರು ಸಾತ್ವಿಕ ಮನೋಭಾವ ಹೊಂದಿದವರಾಗಿದ್ದರು. ಹಝ್ರತ್ ಮುಸ್‌ಅಬ್ ಅವರಿಗೆ ಪವಿತ್ರ ಖುರ್‌ಆನ್ ಓದಿ ಕೇಳಿಸಿದರು. ಬಹಳ ಪ್ರೀತಿಯಿಂದ ಇಸ್ಲಾಮಿನ ತತ್ವಗಳನ್ನು ವಿವರಿಸಿಕೊಟ್ಟರು. ಆಗ ಉಸೈದ್ ಎಷ್ಟು ಪ್ರಭಾವಿತರಾದರೆಂದರೆ ಅವರು ಅಲ್ಲಿಯೇ ಮುಸ್ಲಿಮರಾದರು. ಅವರು ಹೇಳಿದರು: ನನ್ನ ಬಳಿಕ ಇನ್ನೊಬ್ಬ ವ್ಯಕ್ತಿ ಇದ್ದಾರೆ, ಅವರು ಮುಸ್ಲಿಮರಾದರೆ ನಮ್ಮ ಗೋತ್ರ ಸಂಪೂರ್ಣವಾಗಿ ಮುಸ್ಲಿಮರದಾಗುವುದು. ನೀವು ಇಲ್ಲೇ ಇರಿ. ನಾನು ಅವರನ್ನು ನಿಮ್ಮ ಬಳಿಗೆ ಕಳುಹಿಸುತ್ತೇನೆ. ಉಸೈದ್ ಹೋಗಿ ಉಪಾಯದಿಂದ ಸಅದ್ ಬಿನ್ ಮುಆಝುರನ್ನು ಹಝ್ರತ್ ಮುಸ್‌ಅಬ್ ಮತ್ತು ಅಸ್‌ಅದರ ಬಳಿಗೆ ಕಳುಹಿಸಿದರು. ಆಗ ಮುಸ್‌ಅಬ್ ಅವರಿಗೆ ಅದೇ ರೀತಿ ಬಹಳ ಮೃದುವಾಗಿಯೂ ಪ್ರೀತಿಯಿಂದಲೂ ಪ್ರಚಾರ ಮಾಡಿದರು. ಸಅದ್ ಬಿನ್ ಮುಆಝ್ ವಿಧೇಯರಾದರು. ಸಅದ್ ಸ್ನಾನ ಮಾಡಿ ಶಹಾದತ್ ಕಲಿಮ ಪಠಿಸಿದರು. ಅನಂತರ ಸಅದ್ ಬಿನ್ ಮುಆಝ್ ಮತ್ತು ಉಸೈದ್ ಜೊತೆ ಸೇರಿ ತಮ್ಮ ಗೋತ್ರದ ಜನರ ಬಳಿಗೆ ಹೋದರು. ಸಅದ್ ತನ್ನ ಗೋತ್ರದವರೊಂದಿಗೆ ಅರಬಿ ಸಂಪ್ರದಾಯ ಪ್ರಕಾರ ಕೇಳಿದರು: ಬನೀ ಅಬ್ದುಲ್ ಅಶ್‌ಅಲ್ ಗೋತ್ರದ ಜನರೇ, ನೀವು ನನ್ನನ್ನು ಹೇಗೆ ಪರಿಗಣಿಸುತ್ತಿರುವಿರಿ? ಅವರೆಲ್ಲರೂ ಒಮ್ಮತದಿಂದ ಹೇಳಿದರು: ನೀವು ನಮ್ಮ ನಾಯಕರಾಗಿದ್ದೀರಿ. ನೀವು ನಮ್ಮ ನಾಯಕರ ಪುತ್ರನಾದ ನಾಯಕರಾಗಿದ್ದೀರಿ. ನಿಮ್ಮ ಮಾತು

ನಮಗೆ ವಿಶ್ವಾಸಾರ್ಹವಾಗಿದೆ. ಆಗ ಸಅದ್ ಹೇಳಿದರು: ನೀವು ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನು ನಂಬುವ ತನಕ ನನ್ನೊಂದಿಗೆ ನಿಮ್ಮ ಸಂಬಂಧವಿರಲಾರದು. ಅನಂತರ ಸಅದ್ ಆ ಜನರಿಗೆ ಇಸ್ಲಾಮೀ ತತ್ವಗಳನ್ನು ವಿವರಿಸಿಕೊಟ್ಟರು. ಆ ದಿನ ಸಾಯಂಕಾಲದೊಳಗೆ ಆ ಗೋತ್ರದ ಎಲ್ಲರೂ ಮುಸ್ಲಿಮರಾದರು. ಸಅದ್ ಮತ್ತು ಉಸೈದ್ ತಮ್ಮ ಕೈಗಳಿಂದ ತಮ್ಮ ಗೋತ್ರದ ಜನರು ಪೂಜಿಸುತ್ತಿದ್ದ ವಿಗ್ರಹಗಳನ್ನು ತುಂಡರಿಸಿದರು.

ಸಅದ್ ಬಿನ್ ಮುಆಝ್ ರಝಿಅಲ್ಲಾಹು ಅನ್ಹು ಮತ್ತು ಉಸೈದ್ ಬಿನ್ ಹುಝೈರ್(ರ) ಇವರಿಬ್ಬರು ಆ ದಿವಸ ಮುಸ್ಲಿಮರಾದರು ಇವರಿಬ್ಬರನ್ನು ಗಣ್ಯ ಸಹಾಬರವರಲ್ಲಿ ಪರಿಗಣಿಸಲಾಗುತ್ತದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಬರೆಯುತ್ತಾರೆ "ನಿಸ್ಸಂದೇಹವಾಗಿ ಅನ್ಸಾರ್‌ಗಳಲ್ಲಿ ಇವರಿಬ್ಬರ ಸ್ಥಾನವು ಬಹಳ ಉನ್ನತವಾಗಿತ್ತು. ವಿಶೇಶವಾಗಿ ಸಅದ್ ಬಿನ್ ಮುಆಝ್(ರ) ಅವರು ಅನ್ಸಾರ್‌ಗಳಲ್ಲಿ ಎಂತಹ ಸ್ಥಾನಗಳಿಸಿದ್ದರು ಎಂದರೆ ಮುಹಾಜಿರೀನರಲ್ಲಿ ಹಝ್ರತ್ ಅಬೂಬಕ್ಕರ್(ರ) ಅವರಿಗಿದ್ದ ಸ್ಥಾನ ಅವರಿಗಿತ್ತು. ಈ ಯುವಕ ಬಹಳ ನಿಷ್ಠಾವಂತ ಮತ್ತು ಇಸ್ಲಾಮ್ ಹಾಗೂ ಇಸ್ಲಾಮಿನ ಸಂಸ್ಥಾಪಕರ ಪ್ರೇಮಿ ಆದರು. ಅವರು ತಮ್ಮ ಗೋತ್ರದಲ್ಲಿ ಐಶ್ವರ್ಯವಂತರಾಗಿದ್ದರು ಮತ್ತು ಬಹಳ ಜ್ಞಾವುಳ್ಳವರಾಗಿದ್ದರಿಂದ ಇಸ್ಲಾಮ್‌ನಲ್ಲಿಯು ಸಹ ಬಹಳ ಉನ್ನತ ಹಾಗೂ ವಿಶೇಶ ಪದವಿಯನ್ನು ಗಳಿಸಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಬರೆಯುತ್ತಾರೆ: ನಿಸ್ಸಂದೇಹವಾಗಿಯು. ಅವರ ಯೌವನದ ವಯಸ್ಸಿನಲ್ಲಿ ಮೃತ್ಯುವನ್ನು ಕಂಡು ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ಹೇಳಿದರು ಸಅದ್(ರ) ಅವರ ನಿಧನಕ್ಕೆ ಕಾರುಣ್ಯ ನಿಧಿಯಾದ ಅಲ್ಲಾಹನ (ಅರ್ಷ್)ಪೀಠವು ಸಹ ಅಲ್ಲಗಳಿತು. ಒಂದು ಸುದೀರ್ಘ ಸತ್ಯವನ್ನು ಅವಲಂಭಿಸಿತು. ಹೀಗೆ ಬಹಳ ಬೇಗ ಬೇಗನೇ ಔಸ್ ಹಾಗೂ ಖಝ್ರಜ್ ಗೋತ್ರಗಳಲ್ಲಿ ಇಸ್ಲಾಮ್ ಹರಡಿತು. ಯಹೂದಿಯರು ಬಹಳ ಭಯಭೀತರಾಗಿ ಈ ದೃಶ್ಯವನ್ನು ಕಾಣುತ್ತಿದ್ದರು ಮತ್ತು ಮನಸ್ಸಿನಲ್ಲೇ ಮುಂದೆ ಏನಾಗುವುದು ಎಂದು ಭಾವಿಸುತ್ತಿದ್ದರು. (ಸೀರತ್ ಖಾತಮನ್ನಬಿಯೀನ್ ಹಝ್ರತ್ ಮಿರ್ಝಾ ಬಶಿರ್ ಅಹ್ಮದ್ ಸಾಹೆಬ್ ಎಂ. ಎ, ಪುಟ–224–227)

ಹಝ್ರತ್ ಮುಸ್‌ಅಬ್(ರ) ಅವರ ಪ್ರಚಾರದಿಂದ ಅನೇಕ ಜನರು ಮುಸ್ಲಿಮರಾದರು. ನಬವಿ ವರ್ಷ 13 ಹಜ್ಜ್ ಸಂದರ್ಭದಲ್ಲಿ ಮದೀನದಿಂದ 70 ಅನ್‌ಸಾರ್‌ಗಳನ್ನು ಕರದುಕೊಂಡು ರವಾನೆ ಆದರು. ಅದರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ವಿವರಿಸುತ್ತಾರೆ:

ನಬವಿ ವರ್ಷ 13 ಝಿಲ್ ಹಜ್ಜ್ ತಿಂಗಳಲ್ಲಿ ಹಜ್‌ಗೋಸ್ಕರ ಔಸ್ ಮತ್ತು ಖಝ್‌ರಜ್ ಗೋತ್ರಗಳ ಅನೇಕ ನೂರು ಜನರು ಮಕ್ಕಕ್ಕೆ ಆಗಮಿಸಿದರು. ಹಝ್‌ರತ್ ಮುಸ್‌ಅಬ್ ಬಿನ್ ಉಮೈರ್ ಸಹ ಅವರ ಜೊತೆಗಿದ್ದರು. ಆ ಸಮಯದಲ್ಲಿ ಮುಸ್‌ಅಬ್‌ರ ತಾಯಿ ಜೀವಿಸಿದ್ದರು. ಆಕೆ ಬಹುದೇವಾರಾಧಕಿಯಾಗಿದ್ದರೂ ಮುಸ್‌ಅಬ್‌ರನ್ನು ಬಹಳ ಪ್ರೀತಿಸುತ್ತಿದ್ದರು. ಮುಸ್‌ಅಬ್ ಮಕ್ಕಕ್ಕೆ ಆಗಮಿಸಿದ ಸಮಾಚಾರ ಲಭಿಸಿದಾಗ ಆಕೆ ಹೀಗೆ ಹೇಳಿ ಕಳುಹಿಸಿದರು. ಎಲ್ಲರಿಗಿಂತ ಮೊದಲಾಗಿ ನನ್ನನ್ನು ಭೇಟಿಯಾಗಲು ಬರಬೇಕು. ಮುಸ್‌ಅಬ್ ಹೇಳಿದರು: ನಾನು ಇಷ್ಟರ ತನಕ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾಗಿಲ್ಲ. ಅವರನ್ನು ಸಂದರ್ಶಿಸಿದ ನಂತರ ತಮ್ಮ ಬಳಿಗೆ ಬರುವೆನು. ಅನಂತರ ಮುಸ್‌ಅಬ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂದರ್ಶಿಸಿದ ನಂತರ ತನ್ನ ತಾಯಿಯ ಬಳಿಗೆ ಹೋದರು. ಆಕೆ ಬಹಳ ಅಳುತ್ತಾ ದೂರುತ್ತಾ ಇದ್ದರು. ಆಗ ಮುಸ್‌ಅಬ್ ಹೇಳಿದರು: ತಾಯಿ, ನಾನು ತಮ್ಮೊಂದಿಗೆ ಬಹಳ ಉತ್ತಮವಾದ ಒಂದು ಮಾತು ಹೇಳುವೆನು. ಅದು ನಿಮಗೆ ಬಹಳ ಪ್ರಯೋಜನಕರವಾಗುವುದು. ಎಲ್ಲಾ ಜಗಳಗಳು ತೀರ್ಮಾನಗೊಳ್ಳುವುವು. ತಾಯಿ ಕೇಳಿದರು: ಅದೇನು? ಮುಸ್‌ಅಬ್ ನಿಧಾನವಾಗಿ ಹೇಳಿದರು: ನೀವು ವಿಗ್ರಹಾರಾಧನೆ ತ್ಯಜಿಸಿ ಮುಸ್ಲಿಮರಾಗಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿರಿ. ಆದರೆ ಆಕೆ ತೀವ್ರ ಬಹುದೇವಾರಾಧಕಿಯಾಗಿದ್ದರು. ಆಕೆ ಮುಸ್‌ಅಬ್‌ರ ಮಾತು ಆಲಿಸಿದ ಕೂಡಲೆ ಬೊಬ್ಬಿಟ್ಟಳು. ನಾನು ನಕ್ಷತ್ರಗಳ ಆಣೆ ಹಾಕಿ ಹೇಳುತ್ತೇನೆ, ನಾನು ನಿನ್ನ ಧರ್ಮಕ್ಕೆ ಎಂದೂ ಸೇರಲಾರೆ. ಆಕೆ ತನ್ನ ಸಂಬಂಧಿಕರಿಗೆ ಸಂಜ್ಞೆ ಮೂಲಕ ಮುಸ್‌ಅಬ್‌ರನ್ನು ಹಿಡಿಗೂಡಿ ಬಂಧಿಸಬೇಕೆಂದು ಸೂಚಿಸಿದಳು. ಆದರೆ ಮುಸ್‌ಅಬ್ ಅಲ್ಲಿಂದ ಓಡಿ ಹೊರಗೆ ಹೋದರು. (ಸೀರತ್ ಖಾತುಮುನ್ನಬೀಯೀನ್, ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–227)

ಹಝ್ರತ್ ಮುಸ್‌ಅಬ್ ಬಗ್ಗೆ ಇನ್ನಷ್ಟು ವಿವರಿಸಲಿಕ್ಕಿದೆ. ಇನ್‌ಶಾಅಲ್ಲಾಹ್ ಮುಂದಿನ ಖುತ್‌ಬದಲ್ಲಿ ವಿವರಿಸುವೆನು. ಇಂದು ಎರಡು ಜನಾಝಾ ನಮಾಝ್‌ಗಳು ನಿರ್ವಹಿಸಲಿರುವೆನು.

ಎರಡು ಜನಾಝಾಗಳಲ್ಲಿ ಮೊದಲನೇಯದು ಮುಕರ್ರಮ್ ಮಲಿಕ್ ಮುನವ್ವರ್ ಅಹ್ಮದ್ ಜಾವೇದ್ ಸಾಹಿಬ್ ಇಬ್ನು ಮುಕರ್ರಮ್ ಮಲಿಕ್ ಮುಝಫ್ಫರ್ ಅಹ್ಮದ್ ಸಾಹಿಬರದಾಗಿದೆ. ಅವರು ಫೆಬ್ರವರಿ 22ರಂದು 84ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರಿಗೆ ಒಂದು ಸುದೀರ್ಘ ಕಾಲದಿಂದ ಪಿತ್ತಜನಕಾಂಗದ ತೊಂದರೆ ಇತ್ತು ಅದರ ಕಾರಣದಿಂದ ತಾಹಿರ್ ಹಾರ್ಟ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ದಿವಂಗತರು ಅಲ್ಲಾಹನ ಅನುಗ್ರಹದಿಂದ ಮೂಸಿ ಆಗಿದ್ದರು. ಅವರು ಪತ್ನಿ, ನಾಲ್ಕು ಪುತ್ರರು ಹಾಗೂ 3 ಪುತ್ರಿಯರನ್ನು ಬಿಟ್ಟು ಅಗಲಿ ಹೋಗಿದ್ದಾರೆ. ಅವರ ಅಜ್ಜ ಹಝ್ರತ್ ಡಾಕ್ಟರ್ ಝಫರ್ ಅಹ್ಮದ್ ಚೌಧರಿ ಸಾಹಿಬ್ ಮತ್ತು ಅವರ ಪಿತಾಮಹ ಹಝ್ರತ್ ಶೇಖ್ ಅಬ್ದುಲ್ ಕರೀಮ್ ಸಾಹಿಬ್ ಇವರಿಬ್ಬರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೈಯಲ್ಲಿ ಬೈಅತ್ ಮಾಡಿ ಸಹಾಬಿಯ್ಯತ್ ಗೌರವ ಗಳಿಸಿದವರಾಗಿದ್ದರು. ಮಲಿಕ್ ಮುನವ್ವರ್ ಸಾಹೆಬ್ ಅವರು 1968ರಲ್ಲಿ ಸಲ್ಮ ಜಾವೇದ್ ಸಾಹೆಬ್ ಅವರೊಂದಿಗೆ ವಿವಾಹವಾದರು. ಅವರು ಸೂಫಿ ಹಾಮಿದ್ ಸಾಹೆಬ್ ಅವರ ಪುತ್ರಿ ಆಗಿದ್ದರು. ಹಝ್ರತ್ ಹಾಫಿಝ್ ಸೂಫಿ ಗುಲಾಮ್ ಮುಹಮ್ಮದ್ ಸಾಹೆಬ್(ರ) ಮಾರಿಷಿಯಸ್‌ನ ಮುಬಲ್ಲಗ್ ಸಹಾಬಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮೊಮ್ಮಗಳಾಗಿದ್ದರು. ಮತ್ತು ಹಝ್ರತ್ ಡಾ॥ ಝಫರ್ ಹಸನ್ ಸಾಹೆಬ್ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮಮ್ಮಗ (ತಾಯಿ ಕಡೆಯಿಂದ) ಆಗಿದ್ದರು. ಹಝ್ರತ್ ಸೂಫಿ ಗುಲಾಮ್ ಮುಹಮ್ಮದ್ ಸಾಹೆಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ 313 ಸಹಾಬರಲ್ಲಿ ಓಬ್ಬರಾಗಿದ್ದರು. ಹೀಗೆ ಮಲಿಕ್ ಮುನವ್ವರ್ ಜಾವೇದ್ ಸಾಹೆಬರ ಪಿತಾಮಹರು, ಮಾತೆ ಮತ್ತು ಅವರ ಪತ್ನಿಯ ಪಿತಾಮಹರು ಹಾಗೂ ಮಾತೆ ಎಲ್ಲರೂ ಅಲ್ಲಹನ ಅನುಗ್ರಹದಿಂದ ಹಝ್ರತ್ ಮಸೀಮೌಊದ್(ಅ)ರ ಸಹಾಬಿ ಆಗಿದ್ದರು.

ತಮ್ಮ ಜೀವನವನ್ನು ವಖ್ಫ್ ಮಾಡುವ ಬಗ್ಗೆ ಮಲಿಕ್ ಸಾಹೆಬ್ ಹೇಳುತ್ತಾರೆ ವಖ್ಫ್‌ನ ಕಡೆ ನನ್ನ ಗಮನವು ಹೀಗೆ ಹುಟ್ಟಿತು 1982ರಲ್ಲಿ ಅನ್ಸಾರುಲ್ಲಾಹ್ ಇಜ್‌ತಿಮದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ರವರ ಭಾಷಣವು ಕೇಳುತ್ತಿದ್ದೆ ಆ ಭಾಷಣದಲ್ಲಿ ಹುಝೂರ್(ರ) ಅವರು ವಖ್ಫೆ ಝಿಂದಗಿಯ ಮಹತ್ವದ ಬಗ್ಗೆ ಹೇಳಿದರು ಮತ್ತು ಭಾಷಣದ ಮುಕ್ತಾಯದಲ್ಲಿ ಒಂದು ಪಂಕ್ತಿ ಹೀಗೆ ಹೇಳಿದರು "ನಿಮ್ಮ ಕೊನೆಯ ಉಸಿರು ವಖ್ಫ್‌ನಲ್ಲಿ ಬಿಡಲು ನೀವು ಬಯಸುವುದಿಲ್ಲವೇ" ಅವರು ಹೇಳುತ್ತಾರೆ ಈ ಪಂಕ್ತಿಯು ನನಗೆ Turning point ಆಯಿತು. ನಾನು ಸಹ ಯೋಚಿಸತೊಡಗಿದೆ ನಾನು ಸಹ ವಖ್ಫ್ ಮಾಡಬೇಕು ಎಂದು. ಏನೇ ಇರಲಿ ಅನಂತರ ಅವರು ತಮ್ಮನ್ನು ತಾವು ವಖ್ಫ್ ಮಾಡಬೇಕೆಂದು ನಿರ್ಣಯ ಮಾಡಿಕೊಂಡರು. 1983 ಅಗಸ್ಟ್ ದಿನಾಂಕ 10ರಂದು ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರಿಗೆ ವಕ್‌ಫೇ ಝಿಂದಗಿ ಮಾಡುವ ಬೇಡಿಕೆ ಸಲ್ಲಿಸಿದರು. ಹುಝೂರ್ ರಹಿಮಹುಲ್ಲಾಹು 1983 ಅಗಸ್ಟ್ 18ರಂದು ಅವರ ವಕ್‌ಫ್ ಕೋರಿಕೆಗೆ ಮಂಜೂರಾತಿ ನೀಡಿ ನೀವು ನಿಮ್ಮ ಕೆಲವನ್ನು ಮುಗಿಸಿ ಬಂದು ಬಿಡಿ ಎಂದು ಹೇಳಿದರು. ಆಗ ಅವರು ಸರಕಾರಿ ನೌಕರನಾಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) 28 ಆಗಷ್ಟ್ 1983ರಲ್ಲಿ ವಕಾಲತ್ ಸನ್‌ಅತ್ ವ ತಿಜಾರತ್‌ನಲ್ಲಿ ನಿಯುಕ್ತಗೊಳಿಸಿದರು. ಅವರು 1 ಅಕ್ಟೊಬರ್ 1983ರಿಂದ ವಕಾಲತ್ ಸನ್‌ಅತ್ ವ ತಿಜಾರತ್‌ನಲ್ಲಿ ಹಾಜರಾದರು. ವಖ್ಫ್ ಮಾಡುವುದಕ್ಕೆ ಮುಂಚೆ ಅವರು 16 ವರ್ಷಗಳ ಕಾಲ ಪಂಜಾಬ್ ಸರಕಾರದ ಸೆಕ್ರೇಟ್ರೆಟ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅನಂತರ ಸುಮಾರು 10 ವರ್ಷಗಳ ಕಾಲ ತಮ್ಮ ಸ್ವಂತ ಕೆಲಸ ಮಾಡುತ್ತಿದ್ದರು. ನವೆಂಬರ್ 1983ರಲ್ಲಿ ರಿವೀವ್ ಆಫ್ ರಿಲೀಜಿಯನ್‌ನಲ್ಲಿ ಮ್ಯನೆಜರ್ ಆಗಿ ಸೇವೆ ಸಲ್ಲಿಸಿದರು. 1984ರಲ್ಲಿ ಮುಆವಿನ್ ಝೀಯಾಫತ್ ಆಗಿ ಸೇವೆ ಸಲ್ಲಿಸಿದರು. ಏಪ್ರೆಲ್ 20, 1987ರಿಂದ ಜುಲೈ 2016ರ ತನಕ ನಾಯೆಬ್ ನಾಝಿರ್ ಝಿಯಾಫತ್ ಆಗಿದ್ದರು. 1990ರಲ್ಲಿ ಒಂದು ಸಮಿತಿ 'ಕಫಾಲತ್ ಎಕ್ ಸದ್ ಯತಾಮ' ಸ್ಥಾಪನೆ ಆಯಿತು. ಆಗ ಅವರು ಆ ಸಮಿತಿಯ ಮೊದಲನೇಯ ಸೆಕ್ರೇಟರಿ ಆಗಿದ್ದರು ಸುಮಾರು 20 ವರ್ಷಗಳ ಕಾಲ ಈ ಸೇವೆ ಮಾಡಿದರು. 1968 ರಿಂದ 1970ರ ತನಕ ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯ ಪಾಕಿಸ್ತಾನದಲ್ಲಿ ಖಾಯೆದ್ ಜಿಲ್ಲೆ ಆಗಿದ್ದರು. ಹೀಗೆ ಅವರು 10 ವರ್ಷಗಳ ಕಾಲ ಈ ಸೇವೆಯನ್ನು ನಿರ್ವಹಿಸಿದರು. ಅನ್ಸಾರುಲ್ಲಾಹ್‌ದಲ್ಲಿ 1984 ರಿಂದ 2014ರ ವರೆಗೆ ಸೇವೆ ಸಲ್ಲಿಸಿದರು. 1984 ರಿಂದ 2014ರ ವರೆಗೆ 31 ವರ್ಷಗಳ ಕಾಲ ಪಾಕಿಸ್ತಾನದಲ್ಲಿ ಖಾಯೆದ್ ತಹ್‌ರೀಕೆ ಜದೀದ್, ಖಾಯೆದ್ ತರ್‌ಬಿಯ್ಯತ್, ಖಾಯೆದ್ ಇಶಾಅತ್, ಮತ್ತುಳಿದ 5 ವರ್ಷಗಳ ಕಾಲ ನಾಯೆಬ್ ಸದರ್ ಮಜ್‌ಲಿಸ್ ಅನ್ಸಾರುಲ್ಲ ಆಗಿದ್ದರು.

ಮಲಿಕ್ ಸಾಹೇಬರು ಒಂದು ಘಟನೆಯನ್ನು ಹೀಗೆ ವಿವರಿಸಿದ್ದಾರೆ: ನಾನು ಉದ್ಯೋಗಿಯಾಗಿದ್ದಾಗ ನಮ್ಮ ಒಬ್ಬ ಮೇಲಧಿಕಾರಿ ಬಹಳ ದ್ವೇಷಭಾವನೆ ಹೊಂದಿದವರಾಗಿದ್ದರು. ಅವರು ನನ್ನೊಂದಿಗೆ ಸಂವಾದ ನಡೆಸಲು ಪ್ರೊಫೆಸರ್ ಖಾಲಿದ್ ಮಹ್ಮೂದ್ ಸಾಹಿಬರನ್ನು ಕರೆದುಕೊಂಡು ಬಂದರು. ಖಾಲಿದ್ ಮಹ್ಮೂದ್ ಆ ಕಾಲದ ಬಹಳ ದೊಡ್ಡ ವಿದ್ವಾಂಸರಾಗಿದ್ದರು. ಆ ವಿದ್ವಾಂಸನಿಗೆ ಏನೂ ಮಾಡಲು ಸಾಧ್ಯವಾಗದೆ ಹೋದಾಗ ಅವರು ಸಿಟ್ಟಿನಿಂದ ಬೈಯ್ಯಲು ತೊಡಗಿದರು. ಆಗ ನನ್ನ ಮೇಲಧಿಕಾರಿ ಹೆದರಿದರು. ಏನಾದರೂ ಕೆಟ್ಟದು ಸಂಭವಿಸಬಹುದೆಂದು. ಆಗ ಆ ಮೌಲವಿ ನನ್ನ ಮೇಲಧಿಕಾರಿಗೆ ಧೈರ್ಯ ನೀಡಲು ಹೇಳಿದರು: ಈ ಜನರು ಅಲ್ಲಾಹ್, ರಸೂಲ್ ಮತ್ತು ಕಿತಾಬ್ ಮೇಲೆ ಎಷ್ಟು ಅಕ್ರಮ ಮಾಡಿದ್ದಾರೆಂದರೆ ಅಲ್ಲಾಹನು ಅವರನ್ನು ನಾಶ ಮಾಡುತ್ತಿದ್ದನು. ಆದರೆ ಈ ಜನರು ಪ್ರತಿ ಸಾರಿ ರಕ್ಷಿಸಲ್ಪಡುವುದು ಏಕೆಂದರೆ ಅವರು ತಮ್ಮ ನಮಾಝ್‌ಗಳಲ್ಲಿ ಬಹಳ ಅಳುತ್ತಾ ಪ್ರಾರ್ಥಿಸುತ್ತಾರೆ. ಮೌಲವಿ ಹೇಳಿದುದರ ಅರ್ಥವೇನೆಂದರೆ ಅಹ್ಮದಿಯರು ಅಳುತ್ತಾ ಮಾಡುವ ಪ್ರಾರ್ಥನೆ ಪ್ರತಿ ಸಮಯ ಅವರಿಗೆ ಸಂರಕ್ಷಣೆ ನೀಡುತ್ತದೆ. ಅಲ್ಲಾಹನು ಅವರ ಪ್ರಾರ್ಥನೆಗಳನ್ನು ಆಲಿಸುತ್ತಾನೆ ಎಂದಾಗಿತ್ತು. ಸಮುದಾಯವನ್ನು ತಪ್ಪು ಮಾರ್ಗದಲ್ಲಿ ಹಾಕಿ ತಪ್ಪಾದ ಮಾರ್ಗದರ್ಶನ ನೀಡುವವರ ಕಣ್ಣುಗಳನ್ನು ಅಲ್ಲಾಹನು ತೆರೆಯಲಿ. ಅಲ್ಲಾಹನು ಮುಸ್ಲಿಮ್ ಸಮುದಾಯವನ್ನು ಈ ಜನರು ಪ್ರಚಾರ ಮಾಡುವ ಘೋರ ಸುಳ್ಳುಗಳಿಂದಲೂ ವಂಚನೆಗಳಿಂದಲೂ ಸಂರಕ್ಷಿಸಲಿ.

ನಮ್ಮ ಓರ್ವ ಮುಆವಿನ್ ನಾಝಿರ್ ಝಿಯಾಫತ್ ಉಸಾಮ ಅಝ್‌ಹರ್ ಸಾಹೆಬ್ ಹೇಳುತ್ತಾರೆ ಮಲಿಕ್ ಮುನವ್ವರ್ ಸಾಹೆಬ್ ಅವರಲ್ಲಿ ಉತ್ತಮ ವ್ಯವಸ್ಥಾಪಕರಾಗಿದ್ದರು. ರಾತ್ರಿ ಹೊತ್ತು ಎದ್ದು ದಾರುಝ್ಝಿಯಾಫತ್‌ನಲ್ಲಿ ಗಸ್ತು ಮಾಡುತ್ತಿದ್ದರು. ಅವರು ತಮ್ಮ ಕಛೇರಿ ಸಹಾಯಕರನ್ನು ಪರಿಶೀಲಿಸುತಿದ್ದು ಅವರಿಗೆ ಹವಾಮಾನದ ಪ್ರಕಾರ ಚಾಹ ಹಾಗೂ ಮೊಟ್ಟೆಯ ವ್ಯವಸ್ಥೆ ಮಾಡುತ್ತಿದ್ದರು. ಅವರ ಕಛೇರಿ ಸಹಾಯಕರೊಂದಿಗೆ ಬಹಳ ಆತ್ಮೀಯ ಸಂಬಂಧ ಹೊಂದಿದ್ದರು. ಪ್ರತಿಯೊಂದು ಸಹಾಯಕರ ಮನೆಯ ಪರಿಸ್ಥಿತಿಯ ಬಗ್ಗೆ ಅರಿವಿತ್ತು ಅವರು ರಹಸ್ಯವಾಗಿ ಅವರಿಗೆ ಹಣ ಸಹಾಯ ಮಾಡುತ್ತಿದ್ದರು.

ಅವರ ಅಳಿಯ ನದೀಮ್ ಸಾಹೆಬ್ ಹೇಳುತ್ತಾರೆ: ಮಲಿಕ್ ಸಾಹೆಬರು ಅವರಿಗೆ ಒಮ್ಮೆ ಹೇಳಿದರು: ಮೊದಲ ವಿಷಯವೇನೆಂದರೆ ಅವರು ನನಗೆ ನಮಾಝ್ ನಿರ್ವಹಿಸಲು ಹೇಳುತ್ತಿದ್ದರು ಮತ್ತು ಖಿಲಾಫತ್‌ನೊಂದಿಗೆ ಪ್ರೀತಿ ಹಾಗೂ ಧರ್ಮ ಸೇವೆಯ ಬಗ್ಗೆ ಹೇಳುತ್ತಿದ್ದರು. ಅವರು ಹೇಳುತ್ತಾರೆ ಒಮ್ಮೆ ಅವರು ನನಗೆ ಹೇಳಿದರು ನಿವೃತ್ತಿ ಹೊಂದಿದ ನಂತರ ಒಂದು ದಿವಸ ನಾನು ನಿವೃತ್ತಿ ಹೊಂದಿದ್ದೇನೆ ಆದ್ದರಿಂದ ನಾನು ತೌಯಿ ಚಂದಗಳನ್ನು ಅರ್ಧ ಮಾಡುವೆನು ಎಂದು ನಿರ್ದಾರ ಮಾಡಿದೆ. ಆ ದಿವಸ ರಾತ್ರಿ ನನ್ನ ಕನಸ್ಸಿನಲ್ಲಿ ಅಲ್ಲಾಹನು ನನ್ನ ಬಳಿ ಬಂದು ನಾನು ಇಡೀ ಜಗತ್ತಿನ ದೇವರಾಗಿದ್ದೇನೆ. ನೀನು ನಿನ್ನ ಚಂದಗಳನ್ನು ಅರ್ಧ ಮಾಡುತಿದ್ದೀಯ ಎಂದು ಕೇಳಿದೆ. ಬಾ ನಾನು ನಿನಗೆ ನನ್ನ ಇಡೀ ಜಗತ್ತನ್ನು ತೋರಿಸುವೆನು. ಹೀಗೆ ನನಗೆ ಅಲ್ಲಾಹನು ನನ್ನ ಕನಸ್ಸಿನಲ್ಲಿ ಅನೇಕ ಬೆಟ್ಟ ಗುಡ್ಡಗಳನ್ನು, ಕಾಡುಗಳನ್ನು, ಸಮುದ್ರಗಳನ್ನು ಮುಂತಾದವನ್ನು ತೋರಿಸಿ ಹೇಳಿದನು ನಾನು ಈ ಎಲ್ಲಾ ವಸ್ತುಗಳ ಮಾಲಿಕನಾಗಿದ್ದಾಗ ನಿನಗೆ ಯಾವುದರ ಬಗ್ಗೆ ಚಿಂತೆಯಿದೆ ಎಂದನು. ಇಷ್ಟರಲ್ಲಿ ನಾನು ನಿದ್ರೆಯಿಂದ ಎಚ್ಚರಗೊಂಡೆನು. ನಾನು ಚಂದಗಳನ್ನು ಅರ್ಧ ಮಾಡಬೇಕೆಂಬ ನಿರ್ಧಾರವನ್ನು ತ್ಯಜಿಸಿದೆ. ನಾನು ಅದೇ ರೀತಿ ನನ್ನ ಚಂದಗಳನ್ನು ಪಾವತಿಸಲು ಪ್ರಾರಂಭಿಸಿದೆ.

ಅವರ ಪತ್ನಿ ಹೇಳುತ್ತಾರೆ ವಖ್‌ಫೆ ಝಿಂದಗಿಂತ ಮುಂಚೆ ಅವರು ತಮ್ಮ ವ್ಯಾಪಾರ ಮಾಡುತ್ತಿದ್ದಾಗ ಅವರು ಬಹಳಷ್ಟು ಹಣವನ್ನು ತಮ್ಮ ಜೋಬಿನಲ್ಲಿರಿಸಿ ಒಂದು ಹೊದಿಕೆಯನ್ನು ಹೊಂದಿಸಿಕೊಂಡು ರಾತ್ರಿ ಹೊತ್ತು ಚಳಿಗಾಲದಲ್ಲಿ ರಸ್ತೆಯಲ್ಲಿ ಹೋಗುತ್ತಿದ್ದರು ಅವರು ಹೇಳುತ್ತಿದ್ದರು ಯಾರಾದರು ಅವಶ್ಯಕತೆ ಇರುವವರು ಸಿಗುತ್ತಾರೆ ಎಂದು. ಒಮ್ಮೆ ಓರ್ವ ವ್ಯಕ್ತಿ ನಿಂತಿದ್ದನು ಅವನು ಬಹಳ ಸಂಕಷ್ಟದಲ್ಲಿದ್ದನು ಅವನ ತಾಯಿ ರೋಗಿ ಆಗಿದ್ದಳು ಅವನ ಹತ್ತಿರ ಹಣವಿರಲಿಲ್ಲ. ಅವರು ತಮ್ಮಲ್ಲಿದ್ದ ಆ ಸಂಪೂರ್ಣ ಹಣವನ್ನು ಅವನಿಗೆ ನೀಡಿ ಮನೆಗೆ ಹಿಂದಿರುಗಿದರು.

ಆಸಿಫ್ ಮಜೀದ್ ಸಾಹೆಬ್ ಮುಆವಿನ್ ನಾಝಿರ್ ಝಿಯಾಫತ್ ಮತ್ತು ಮುರಬ್ಬಿ ಆಗಿದ್ದಾರೆ ಅವರು ಹೇಳುತ್ತಾರೆ ಕೆಲವೊಮ್ಮೆ ರಶ್ ಜಾಸ್ತಿಯಾದಾಗ ಅತಿಥಿಗಳ ಆಶ್ರಯದಲ್ಲಿ ತೊಂದರೆ ಆಗುತ್ತಿತ್ತು. ಕೆಲವು ಅತಿಥಿಗಳು ಸಾರ್ವಜನಿಕವಾಗಿಯೂ ಹಾಗೂ ಕಛೇರಿಯಲ್ಲಿ ಬಂದೂ ಸಹ ಬಹಳ ಕಠೂರ ಭಾಷೆ ಉಪಯೋಗಿಸುತ್ತಿದ್ದರು ಆದರೆ ಮಲಿಕ್ ಜಾವೇದ್ ಸಾಹೆಬ್ ಅವರು ಬಹಳ ಪ್ರೀತಿಯಿಂದ ವರ್ತಿಸುತ್ತಿದ್ದರು ಕೆಲವೊಮ್ಮೆ ಅವರು ಕೈ ಜೋಡಿಸಿ ಕೇಳಿಕೊಳ್ಳುತ್ತಿದ್ದನ್ನು ಸಹ ನೋಡಿದ್ದೆವು. ದಿವಂಗತರು ಕೈ ಜೋಡಿಸಿ ಕ್ಷಮೆ ಯಾಚಿಸುತ್ತಿದ್ದ ಅತಿಥಿಗಳು ಅವರ ಮಕ್ಕಳ ವಯಸ್ಸಿನವರಾಗಿರುತ್ತಿದ್ದರು. ಒಮ್ಮೆ ನಾನು ಆ ಅತಿಥಿಗಳು ಹೋದ ನಂತರ ಅವರ ಬಳಿ ಹೋಗಿ ಕೇಳಿದೆ ಮಲಿಕ್ ಸಾಹೆಬ್ ನೀವು ಏಕೆ ಕೈ ಜೋಡಿಸಿ ಕ್ಷಮೆ ಕೇಳಿದಿರಿ. ಅದನ್ನು ನೋಡಿ ನನಗೆ ತೊಂದರೆ ಆಗಿದೆ ಎಂದು. ಅದಕ್ಕೆ ಅವರು ಕೇಳಿದರು ನಾನು ಕ್ಷಮೆ ಕೇಳಿರುವುದು ನಿಮಗೆ ತೊಂದರೆ ಏಕಾಯಿತು? ನೆನಪಿಡಿರೀ ಈ ಅತಿಥಿಗಳು ಹಝ್ರತ್ ಮಸೀಹ್ ಮೌಊದ್[ಅ] ಅವರ ಅತಿಥಿಗಳಾಗಿದ್ದಾರೆ. ಅವರು ತಮ್ಮ ಅತಿಥಿಗಳನ್ನು ಸಮಾಧಾನ ಮಾಡಿಸಲು ಬರಿಕಾಲಿನಲ್ಲಿ ನಡೆದುಕೊಂಡು ಹೋಗಿದ್ದರು.

ಮತ್ತೆ ಆಸಿಫ್ ಮಜೀದ್ ಸಾಹೆಬ್ ಹೇಳುತ್ತಾರೆ: ಮಲಿಕ್ ಜಾವೇದ್ ಸಾಹೆಬ್ ಒಮ್ಮೆ ಹೇಳಿದರು: ಒಮ್ಮೆ ಓರ್ವ ಹಿರಿಯ ಅತಿಥಿ ನನ್ನ ಬಳಿ ಬಂದು ಪಂಜಾಬಿ ಭಾಷೆಯಲ್ಲಿ ಬಹಳ ಸಿಟ್ಟಿನಲ್ಲಿ ಹೇಳಿದರು ನೀನು ಮಲಿಕ್ ಮುನವ್ವರ್ ಆಗಿದ್ದೀಯಾ? ಎಂದು ಅದಕ್ಕೆ ನಾನು ಉತ್ತರಿಸಿದೆ ಹೌದು ನಾನೇ ಆಗಿದ್ದೇನೆ ಎಂದೆನು. ಅದಕ್ಕೆ ಅವರು ಪುನಃ ಹೇಳಿದರು ಈ ಲಂಗರ್ ಖಾನ ನಿನ್ನ ತಂದೆಯದ್ದಾಗಿದೆಯೇ? ಎಂದು ಕೇಳಿದರು ಅದಕ್ಕೆ ಮಲಿಕ್ ಮುನೀರ್ ಸಾಹೆಬ್ ಬಹಳ ವಿನಮ್ರತೆಯಿಂದ ಹೇಳಿದರು ಇಲ್ಲ ಸಾಹೇಬರು ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಲಂಗರ್ ಆಗಿದೆ. ಅವರು ನನ್ನ ಹಾಗೂ ನಿಮ್ಮ ತಂದೆ ಆಗಿದ್ದಾರೆ ಎಂದು ಹೇಳಿದಾಗ ಆ ಹಿರಿಯ ಅತಿಥಿಯರು ಸಾಮಾಧಾನದಿಂದ ಕುಳಿತುಕೊಂಡರು.

ಕೆಲವೊಮ್ಮೆ ಅತಿಥಿಯರು ಸಹ ಬಹಳ ಮಿತಿ ಮೀರುತ್ತಾರೆ. ನನ್ನ ಬಳಿ ಸಹ ಇಂತಹ ಅನೇಕ ದೂರುಗಳು ಬರುತ್ತಿರುತ್ತವೆ. ದಾರುಝ್ಝಿಯಾಫತ್‌ನಲ್ಲಿ ಹೀಗೆ ವರ್ತಿಸುತ್ತಾರೆ ಎಂದು. ಅನಂತರ ಅದರ ಬಗ್ಗೆ ಪರಿಶೀಲಿಸಿದಾಗ ಅರ್ಥವಾಗುತ್ತದೆ ಅತಿಥೀಯರಲ್ಲಿಯೇ ಕೊರತೆ ಇರುತ್ತದೆ ಅವರು ಸಹನೆಯಿಂದ ಇರುವುದಿಲ್ಲ ಎಂದು. ಹೀಗೆ ಅತಿಥಿಯರು ಸಹ ವ್ಯವಸ್ಥಾಪಕರೊಂದಿಗೆ ಸಹಕರಿಸಬೇಕು. ನಾನು ರಬ್ವಾದಲ್ಲಿ ನಾಝಿರ್ ಅಅ್‌ಲಾ ಆಗಿದ್ದಾಗ ನಾನು ನಾಝಿರೆ ಝಿಯಾಫತ್ ಸಹ ಆಗಿದ್ದೆ. ಆಗ ಅವರು ನಾಯಿಬ್ ನಾಝಿರೆ ಝಿಯಾಫತ್ ಆಗಿದ್ದರು. ಅವರಿಗೆ ಜಮಾಅತಿನ ಸಂಪತ್ತಿನ ಬಗ್ಗೆ ಬಹಳ ಚಿಂತೆ ಇತ್ತು. ಅವರು ಸತ್ಯವಾದ ಮಾತು ಹೇಳಲು ಎಂದೂ ಹಿಂಜರಿಯುತ್ತಿರಲಿಲ್ಲ. ಅವರು ನನ್ನ ನಾಯಿಬ್ ಆಗಿದ್ದರೂ ಯಾವುದಾದರೂ ವಿಷಯ ಜಮಾಅತಿಗೆ ಹಿತಕರವಾಗಿದ್ದರೆ ಮತ್ತು ನಾನು ಬೇರೆ ಅಭಿಪ್ರಾಯ ಹೊಂದಿದ್ದರೆ ಅವರು ಯಾವುದೇ ಸಂಕೋಚವಿಲ್ಲದೆ ನನ್ನ ಅಭಿಪ್ರಾಯದ ವಿರುದ್ಧ ಸಲಹೆ ನೀಡುತ್ತಿದ್ದರು. ಅವರು ಹೇಳುತ್ತಿದ್ದರು: ಈ ರೀತಿ ಮಾಡಿದರೆ ಉತ್ತಮ ಎಂದು. ಪ್ರತಿಯೊಬ್ಬ ವಾಕಿಫೆ ಝಿಂದಗಿ ಹೀಗೆಯೇ ವರ್ತಿಸುವವರಾಗಬೇಕು. ಅವರು ತಮ್ಮ ಅಭಿಪ್ರಾಯವನ್ನು ಆದರ ಭಾವನೆಯಿಂದ ಸರಿಯಾದ ರೀತಿಯಲ್ಲಿ ಮಂಡಿಸಬೇಕು. ಮಲಿಕ್ ಸಾಹೇಬರಿಗೆ ಖಿಲಾಫತ್‌ನೊಂದಿಗೆ ಬಹಳ ನಿಷ್ಠೆಯ ಸಂಬಂಧವಿತ್ತು. ಅವರ ಪ್ರತಿಯೊಂದು ಪತ್ರದಿಂದ ಮತ್ತು ಅವರ ಸಂದರ್ಶನದಿಂದ ಅದು ಸ್ಪಷ್ಟವಾಗುತ್ತಿತ್ತು.

ಅಲ್ಲಾಹನು ಅವರೊಂದಿಗೆ ರಹಮ್ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸುವವನಾಗಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಪತ್ನಿ ಮತ್ತು ಮಕ್ಕಳಿಗೆ ಸಹನೆ ಮತ್ತು ಧೈರ್ಯ ದಯಪಾಲಿಸಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸುವ ಭಾಗ್ಯ ಅವರಿಗೂ ದಯಪಾಲಿಸಲಿ.

ಎರಡನೆಯ ಜನಾಝ ಮುಕರ್‌ರಮ್ ಪ್ರೊಫೆಸರ್ ಮುನವ್ವರ್ ಶಮೀಮ್ ಖಾಲಿದ್ ಸಾಹಿಬ್ ಇಬ್ನು ಶೇಖ್ ಮಹ್‌ಬೂಬ್ ಆಲಮ್ ಖಾಲಿದ್ ಸಾಹಿಬ್ ಅವರದು. ಫೆಬ್ರವರಿ 16ರಂದು ರಬ್ವದಲ್ಲಿ ಅಂದಾಜು 81ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರ ತಂದೆ ಶೇಖ್ ಮಹ್‌ಬೂಬ್ ಆಲಮ್ ಖಾಲಿದ್ ಸಾಹೆಬ್ ಟಿ.ಐ ಸ್ಕೂಲಿನಲ್ಲಿ ಪ್ರೋಫೆಸರ್ ಆಗಿದ್ದರು. ಅನಂತರ ಅವರನ್ನು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರವರು ನಾಝಿರ್ ಬೈತುಲ್ ಮಾಲ್ ಆಮದ್ ಆಗಿ ನಿಯುಕ್ತಗೊಳಿಸಿದರು. ಒಂದು ಸುದೀರ್ಘ ಕಾಲ ಅವರು ನಾಝಿರ್ ಬೈತುಲ್ ಮಾಲ್ ಆಮದ್ ಆಗಿದ್ದರು. ಅನಂತರ ಹಝ್ರತ್ ಖಲೀಫತುಲ್ ಮಸೀಹ್ ರಾಬಿ[ರ] ಅವರು ಅವರನ್ನು ಸದರ್ ಸದರ್ ಅಂಜುಮನ್ ಅಹ್ಮದಿಯರನ್ನಾಗಿ ನೇಮಿಸಿದರು. ಶಮೀಮ್ ಆಲಮ್ ಸಾಹೆಬ್ ಅವರು ಅವರ ಹಿರಿಯ ಪುತ್ರರಾಗಿದ್ದರು. ಅವರ ದ್ವಿತೀಯ ಪತ್ನಿ ಶಾಹಿದ ಮುನವ್ವರ್ ಶಮೀಮ್ ಸಾಹೆಬ ಮತ್ತು ಮೃತರ ಮೊದಲನೇಯ ಪತ್ನಿಯ ಓರ್ವ ಪುತ್ರ ಖಾಲಿದ್ ಅನ್ವರ್ ಅಹ್ಮದ್ ಸಾಹೆಬ್ ಅವರು ಕೆನೆಡದಲ್ಲಿದ್ದಾರೆ ಅವರನ್ನು ಅಗಲಿ ಹೋಗಿದ್ದಾರೆ. 1964ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್[ರ] ಸಾಹೆಬರು ಕಾಲೇಜಿನ ಪ್ರಾಂಶುಪಾಲರಾಗಿದ್ದರು ಮತ್ತು

ಸದರ್ ಸದರ್ ಅಂಜುಮನ್ ಅಹ್ಮದಿಯ ಆಗಿದ್ದರು. ಆಗ ಅವರು ಮುನವ್ವರ್ ಶಮೀಮ್ ಸಾಹೆಬರ ನಿಕಾಹ್ ಮಸ್‌ಜಿದ್ ಮುಬಾರಕ್‌ನಲ್ಲಿ ಪಠಿಸಿದರು. ಆ ಸಂದರ್ಭದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹು ಹೇಳಿದ್ದರು: ಪ್ರೊಫೆಸರ್ ಮುನವ್ವರ್ ಶಮೀಮ್ ಖಾಲಿದ್ ನನ್ನ ಗಾಢ ಮಿತ್ರ ಪ್ರೊಫೆಸರ್ ಮಹ್‌ಬೂಬ್ ಆಲಮ್ ಖಾಲಿದ್ ಸಾಹಿಬರ ಪುತ್ರರಾಗಿದ್ದಾರೆ ಮತ್ತು ನನ್ನ ಪುತ್ರರ ಹಾಗೆ ಪ್ರೀತಿಗೆ ಪಾತ್ರರೂ ಆಗಿದ್ದಾರೆ. ಹಝ್ರತ್ ಖಲೀಫತುಲ್ ಮಸೀಹ್ ಸಲಿಸ್(ರ) ಅವರೊಂದಿಗೆ ಅವರ ತಂದೆಯ ಸಂಬಂಧವೂ ಬಹಳ ಗಾಢವಾಗಿತ್ತು. ಮಜ್‌ಲಿಸ್ ಅನ್ಸಾರುಲ್ಲಾ ಪಾಕಿಸ್ತಾನದಲ್ಲಿ ಅವರ ಸೇವೆಯ ಅವಧಿಯು 28ವರ್ಷಗಳ ಸುದೀರ್ಘ ಕಾಲದಲ್ಲಿ ಅವಲಂಭಿಸಿದೆ.

ಪ್ರೊಫೆಸರ್ ಮುನವ್ವರ್ ಸಾಹಿಬರು ಅಸಂಖ್ಯಾತ ಸದ್ಗುಣಗಳನ್ನು ಹೊಂದಿದವರಾಗಿದ್ದರು. ಅವರಿಗೆ ಖಿಲಾಫತ್‌ನೊಂದಿಗೆ ಹೃತ್ಪೂರ್ವಕ ಪ್ರೀತಿ ನಿಷ್ಠೆ ಮತ್ತು ಅನುಸರಣೆ ಇತ್ತು. ಅವರು ಉಪವಾಸ, ನಮಾಝ್, ತಹಜ್ಜುದ್ ಮೊದಲಾದುವುಗಳನ್ನು ನಿಷ್ಠೆಯಿಂದ ಅನುಷ್ಠಿಸುವವರಾಗಿದ್ದರು. ನಾನು ಕಾಲೇಜಿನಲ್ಲಿ ಸ್ವಲ್ಪ ಕಾಲ ಅವರ ವಿದ್ಯಾರ್ಥಿಯಾಗಿದ್ದೆ. ಅನಂತರ ನಾನು ಅಮೀರೆ ಮಖಾಮಿ ಮತ್ತು ನಾಝಿರೆ ಅಲ್‌ಲಾ ಆಗಿ ನೇಮಿಸಲ್ಪಟ್ಟಾಗ ಅವರು ನನ್ನೊಂದಿಗೆ ಅತ್ಯಂತ ಆದರ ಭಾವದಿಂದ ವರ್ತಿಸುತ್ತಿದ್ದರು. ನಾನು ವಿದ್ಯಾರ್ಥಿ ಆಗಿದ್ದೆ ಎಂಬ ಭಾವನೆ ಹುಟ್ಟುವಂತೆ ಎಂದೂ ಮಾಡಿರಲಿಲ್ಲ. ಅವರು ಖಿಲಾಫತ್ ಮತ್ತು ಜಮಾಅತಿನ ನಿಝಾಮವನ್ನು ಅತ್ಯಂತ ಬದ್ಧತೆಯಿಂದ ಅನುಸರಿಸುವವರಾಗಿದ್ದರು. ನಾನು ಖಲೀಫ ಆದ ನಂತರ ಅವರು ನನ್ನೊಂದಿಗೆ ಹೊಂದಿದ್ದ ಸಂಬಂಧ ಅಸಾಮಾನ್ಯವಾಗಿತ್ತು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸಲಿ. ಅಲ್ಲಾಹನು ಅವರಿಗೆ ತನಗೆ ಪ್ರಿಯರಾದವರ ಸಮೀಪ ಸ್ಥಳ ನೀಡಲಿ. ಅವರ ಸಂಬಂಧಿಕರಿಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸುವ ಭಾಗ್ಯ ಅಲ್ಲಾಹನು ದಯಪಾಲಿಸಲಿ – ಆಮೀನ್.

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಯಾರು ಅತ್ಯಂತ ಪ್ರಯತ್ನಪಡುತ್ತಾನೋ, ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. ಇದು ಲೋಕದ ಪರೀಕ್ಷೆಗೋಸ್ಕರ ಸಿದ್ಧತೆ ಕೈಗೊಳ್ಳುವವನು. ಹಗಲಿರುಳು ಎನ್ನದೇ ಪರಿಶ್ರಮಪಡುತ್ತಿರುವ ವಿದ್ಯಾರ್ಥಿಗಳನ್ನು ನೋಡಿ ನಾವು ಕರುಣೆ ತೋರುವವನಾದರೆ ಅತ್ಯಂತ ದಯಾಳು ಆದ, ಕರುಣಾನಿಧಿಯಾದ ಅಲ್ಲಾಹನು ತನ್ನ ಕಡೆ ಬರಲು ಪ್ರಯತ್ನಪಡುವವರನ್ನು ಕೈಬಿಡುವನೇ? ಖಂಡಿತ ಇಲ್ಲ, ಖಂಡಿತ ಇಲ್ಲ. ಅಲ್ಲಾಹನು ಯಾರ ಪರಿಶ್ರಮವನ್ನು ವ್ಯರ್ಥಗೊಳಿಸುವುದಿಲ್ಲ. ಇನ್ನಲ್ಲಾಹ ಲಾ ಯುಝೀಉ ಅಜ್‌ರಲ್ ಮುಹಸಿನೀನ್ (ಅತ್ತಾಬ: 120) ಮತ್ತು ಹೇಳಿದನು. ಮೈಂಯಾಮಲ್ ಮಿಸ್‌ಖಾಲ ಝುರ್ರತಿನ್ ಖೈರೈಂಯರಹ್ (ಅಝ್ಝಲ್‌ಝಾಲ್–8) ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ತಮ್ಮ ವರ್ಷ ಪೂರ್ತಿ ನಡೆಸಿದ ಶ್ರಮ ವ್ಯರ್ಥ ಆದದ್ದನ್ನು ಕಂಡು ಪರಿತಪಿಸುತ್ತಿರುವುದನ್ನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದುದ್ದನ್ನು ನಾವು ಕಾಣುತ್ತೇವೆ. ಆದರೆ ಅಲ್ಲಾಹನ ದಯೆ ಮತ್ತು ಅವನ ಅಪಾರವಾದ ಅನುಗ್ರಹ ಹೇಗಿದೆ ಎಂದರೆ ಅವನು ಲವಲೇಶ ಮಾತ್ರದ ಸತ್‌ಕ್ರಿಯೆಯನ್ನು ವ್ಯರ್ಥಗೊಳಿಸುವುದಿಲ್ಲ. ಹೀಗಿರುವಾಗ ವಿಷಾದದ ಸಂಗತಿಯೆಂದರೆ ಮನುಷ್ಯನು ಊಹಾತ್ಮಕ ಹಾಗೂ ಅನುಮಾನ ಕಾರ್ಯದೆಡೆ ತನ್ನ ಎಲ್ಲಾ ಸುಖ ಸೌಕರ್ಯಗಳನ್ನು ಬಿಟ್ಟು ಪರಿಶ್ರಮ ವಹಿಸುತ್ತಾನೆ. ಉನ್ನತಿ ಕಾಣಬಹುದು ಎಂಬ ಹುಸಿ ಭರವಸೆಯಲ್ಲಿ ಕಷ್ಟ ಸುಖಗಳನ್ನು ಸಹಿಸಿಕೊಳ್ಳುತ್ತಾನೆ. ಒಬ್ಬ ವ್ಯಾಪಾರಸ್ಥನಾದವನು ಲಾಭದ ಭರವಸೆಯಲ್ಲಿ ಲಕ್ಷಾನುಗಟ್ಟಲೆ ಹಣ ಪಣಕ್ಕಿಡುತ್ತಾನೆ. ಆದರೆ ಖಂಡಿತವಾಗಿ ಯಶಸ್ಸು ದೊರೆಯಬಹುದು ಎಂಬ ಭರವಸೆ ಸ್ವತಃ ಅವನಗಿರುವುದಿಲ್ಲ. ಆದರೆ ಅಲ್ಲಾಹನ ಕಡೆ ಲಕ್ಷ್ಯ ವಹಿಸುವವನಿಗೆ (ಅವನ ವಾಗ್ದಾನಗಳು ನಿಶ್ಚಯವಾದರೂ ಅಚಲವಾದುದಾಗಿದೆ.) ಅವನೆಡೆ ಹೆಜ್ಜೆಯಿಡುವವನ ಕಿಂಚಿತ್ತೂ ಪರಿಶ್ರಮ ವ್ಯರ್ಥ ವಾಗುವುದಿಲ್ಲ. ಹಗಲಿರುಳು ಎನ್ನದೆ ಅಷ್ಟೊಂದು ಪರಿಶ್ರಮಪಡುವುದು ಕಾಣುತ್ತಿಲ್ಲ. ಇದನ್ನು ಜನರು ಏಕೆ ಅರ್ಥಮಾಡಿಕೊಳ್ಳುವುದಿಲ್ಲ? ಅವರು ಏಕೆ ಭಯಪಡುವುದಿಲ್ಲ. ಕೊನೆಯಲ್ಲಿ ಒಂದು ದಿನ ಸಾಯಬೇಕಿದೆ. ಅದರಲ್ಲಿ ಅವರು ಅಷ್ಟೆಲ್ಲ ವಿಫಲತೆಗಳನ್ನು ಕಂಡರೂ ಈ ಮಾರ್ಗದೆಡೆ ಏಕೆ ಚಿಂತಿಸುವುದಿಲ್ಲ. ಅಲ್ಲಿ ನಷ್ಟದ ಪ್ರಶ್ನೆಯೇ ಇಲ್ಲ. ಮತ್ತು ಯಶಸ್ಸು ನಿಶ್ಚಯವಾಗಿದೆ. ಕೃಷಿಕನು ಕೃಷಿಯಲ್ಲಿ ಅಷ್ಟೊಂದು ಪರಿಶ್ರಮ ವಹಿಸುತ್ತಾನೆ. ಅದರೆ ಯಾರು ಹೇಳಬಲ್ಲರು. ಅವರು ಖಂಡಿತವಾಗಿಯೂ ಸುಖಪಡುತ್ತಾನೆಂದು.

ಅಲ್ಲಾಹನು ಎಂತಹ ಕರುಣಾಮಯಿಯಾಗಿದ್ದಾನೆ ಅವನು ಎಂಥಹ ನಿಧಿಯಾಗಿದ್ದಾನೆ. ಅವನಲ್ಲಿ ಒಂದು ಚಿಕ್ಕಾಸೂ ಜಮಾ ಮಾಡಬಹುದು. ರೂಪಾಯಿ ಹಾಗೂ ಚಿನ್ನದ ನಾಣ್ಯದ (ಅಶ್ರಫಿ) ಕಳ್ಳತನದ ಭಯವೂ ಇಲ್ಲ. ದಿವಾಳಿಯಾಗುವ ಭಯವೂ ಇಲ್ಲ. ಹದೀಸಿನಲ್ಲಿ ಯಾರೊಬ್ಬರೂ ರಸ್ತೆಯಿಂದ ಒಂದು ಮುಳ್ಳನ್ನಾದರೂ ತೆಗೆದುಹಾಕಿದರೆ ಅದಕ್ಕೂ ಪುಣ್ಯವಿದೆ. ನೀರು ತೆಗೆಯುತ್ತಾ ಒಂದು ಬಕೆಟ್ ನೀರು ತನ್ನ ಸಹೋದರನ ಕೊಡದಲ್ಲಿ ಹಾಕಿದರೆ ಅಲ್ಲಾಹನು ಅದರ ಪುಣ್ಯದಿಂದಲೂ ವಂಚಿಸುವುದಿಲ್ಲ. ಆದುದರಿಂದ ನೆನಪಿಡಿರಿ. ಮನುಷ್ಯನಿಗೆ ಅಸಫಲತೆಯಿಲ್ಲದ ಮಾರ್ಗ ಒಂದಿದ್ದರೆ ಅದು ಅಲ್ಲಾಹನ ಮಾರ್ಗವಾಗಿದೆ. ಇಹಲೋಕದ ಹೆದ್ದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ ಏಳು–ಬೀಳು ಮತ್ತು ವಿಫಲತೆಯ ಕಲ್ಲು ಬಂಡೆಗಳಿವೆ. ಅಲ್ಲಾಹನನ್ನು ಪಡೆಯಲು ತನ್ನ ರಾಜ ಮನೆತನ, ಸಿಂಹಾಸನವನ್ನು ತ್ಯಜಿಸಿದ ಜನರು ಮೂರ್ಖರಾಗಿರಲಿಲ್ಲ. ಉದಾಹರಣೆಗೆ ಇಬ್ರಾಹಿಂ, ಅದಮ್, ಶಾಹ್‌ಶುಜಾಲಿ, ಶೌಹ್ ಅಬ್ದುಲ್ ಅಝೀಝ್ ಅವರು ಮುಜದ್ದಿದ್ (ಧರ್ಮ ಸುಧಾರಕರು) ಆಗಿದ್ದರು. ಸರಕಾರ, ಸಿಂಹಾಸನ ಮತ್ತು ಲೋಕದ ವೈಭವವನ್ನು ತ್ಯಜಿಸಿದ್ದರು. ಅದಕ್ಕೆ ಕಾರಣ ಇಹಲೋಕ ಮಾರ್ಗದಲ್ಲಿ ಪ್ರತಿ ಹೆಜ್ಜೆಯಲ್ಲೂ ಎಡರು ತೊಡರುಗಳಿವೆ.

ಅಲ್ಲಾಹನು ಲೌಕಿಕ ವಸ್ತುಗಳನ್ನು ಅತ್ಯಂತ ತುಚ್ಛ ದೃಷ್ಟಿಯಿಂದ ಕಾಣುವಂತಾಗುತ್ತದೆ. ಆದುದರಿಂದ ಅಲ್ಲಾಹನ ಸುಜ್ಞಾನವನ್ನು ಬಯಸಿರಿ. ಮತ್ತು ಅವನೆಡೆಯೇ ಹೆಜ್ಜೆ ಹಾಕಿರಿ. ಇದರಲ್ಲಿಯೇ ನಿಮ್ಮ ಹಿತ ಅಡಗಿದೆ. **(ಮಲ್ಫೂಝಾತ್ ಸಂ 1, ಪುಟ 122 ರಿಂದ 125 ಮುದ್ರಣ 2018 ಖಾದಿಯಾನ್).**


**M.Sc Physics, B.Ed ಶಿಕ್ಷಕರು ಬೇಕಾಗಿದ್ದಾರೆ**

ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್ ಅಡಿಯಲ್ಲಿ ನಝಾರತ್ ತಾಲೀಮ್‌ನಲ್ಲಿ ಒಂದು ಹುದ್ದೆ ತುಂಬಬೇಕಾಗಿರುವುದು. ಆಸಕ್ತಿವುಳ್ಳ ಅಭ್ಯರ್ಥಿಗಳು ಕೆಳಕಂಡ ವಿವರಗಳೊಂದಿಗೆ ಅರ್ಜಿ ಸಲ್ಲಿಸಬಹುದೆಂದು ತಮ್ಮ ಗಮನಕ್ಕರ ತರಲಾಗುತ್ತದೆ.

**ವಿವರಗಳು (ಶರತ್ತುಗಳು)**

- ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯು UGC ಯಿಂದ ಮಾನ್ಯತೆಪಡೆದ ಯಾವುದೇ ವಿಶ್ವವಿದ್ಯಾಲಯದಿಂದ M.Sc Physics, B.Ed. ಶೇ50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.
- ಯಾವುದೇ Secondary classನಲ್ಲಿ ಕನಿಷ್ಠ 2 ವರ್ಷದವರೆಗೆ Physics ಬೋಧಿಸುವ ಅನುಭವ ಹೊಂದಿರಬೇಕು.
- ಅಭ್ಯರ್ಥಿಯ ವಯಸ್ಸು 22 ರಿಂದ 37 ವರ್ಷ ನಡುವೆ ಆಗಿರಬೇಕು.
- ಕೇಂದ್ರ ಆಯ್ಕೆ ಸಮಿತಿಯಿಂದ ಆಯೋಜಿತ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣ ಅಭ್ಯರ್ಥಿಯನ್ನೇ ಸಂದರ್ಶನಕ್ಕೆ ಕರೆಯಲಾಗುವುದು.
- ಲಿಖಿತ ಮತ್ತು ಮೌಖಿಕ ಸಂದರ್ಶನದಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಯನ್ನು ನೂರ್ ಆಸ್ಪತ್ರೆ ಖಾದಿಯಾನ್ ಜಾರಿಗೊಳಿಸಿದ Medical fitness certificate ಪ್ರಸ್ತುತಪಡಿಸಬೇಕಾಗುವುದು.
- ಸಂದರ್ಶನಕ್ಕೆ ಹಾಜರಾಗುವ ಅಭ್ಯಥಿ ಖಾದಿಯಾನಿಗೆ ಹೋಗಿ ಬರುವ ಮತ್ತು ವೈದ್ಯಕೀಯ ಎಲ್ಲಾ ಖರ್ಚು ಸ್ವಯಂ ಭರಿಸಬೇಕಾಗುವುದು.
- ಆಯ್ಕೆಗೊಂಡ ನಂತರ ಖಾದಿಯಾನಿನಲ್ಲಿ ವಸತಿ ವ್ಯವಸ್ಥೆಯು ತಾನೇ ನೋಡಿಕೊಳ್ಳಬೇಕಾಗುವುದು.
- ಬದರ್ ವಾರ ಪತ್ರಿಕೆಯಲ್ಲಿ ಪ್ರಕಟಣೆ ನೀಡಿದ ಎರಡು ತಿಂಗಳ ನಂತರ ಪರೀಕ್ಷೆಯ ದಿನಾಂಕ ಸೂಚಿಸಲಾಗುವುದು.
- ಪ್ರಸ್ತುತ ಹುದ್ದೆಗೆ ಬೇಕಾದ ಅರ್ಜಿಯ ನಮೂನೆಗಳು ನಝಾರತ್ ದಿವಾನ್ ಖಾದಿಯಾನ್ ಮೂಲಕ ಪಡೆಯಬಹುದಾಗಿದೆ. ಅರ್ಜಿ ಪೂರ್ಣ ರೀತಿಯಲ್ಲಿ ತುಂಬಿಸಿ ಕೊಟ್ಟ ನಂತರ ಕಯಿದೆ ಅನ್ವಯ ಕ್ರಮಕೈಗೊಳ್ಳಲಾಗುವುದು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:** ನಝಾರತ್ ದಿವಾನ್ ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್

E-mail: diwan@qadian.in

01872-501130, 9646351280, 9464066686

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*
ನನಗೆ ಅಹ್ಮದಿಯ ಜಮಾಅತಿನ Toll Free Number ದೊರೆಯಿತು. ನಾನು ಜಮಾಅತ್‌ಅನ್ನು ಸಂಪರ್ಕಿಸಿದೆ. ಅ ನಡುವೆ ಇನ್ನೊಂದು ಕನಸು ಬಿತ್ತು. ಅದರಲ್ಲಿ ನಾನು ಖಲೀಫತುಲ್ ಮಸೀಹ್‌ರವರನ್ನು ನೋಡಿದೆ. ಅವರು ಮೇಲೆ ಕುಳಿತುಕೊಂಡಿದ್ದಾರೆ ಮತ್ತು ಬೈಅತ್ ಪಡೆಯುತ್ತಿದ್ದಾರೆ. ಹಲವು ಜನರು ಅವರ ಕೈಯಲ್ಲಿ ಕೈಕೊಡಲು ಮುಂದಾಗುತ್ತಾರೆ. ಮತ್ತು ಬೈಅತಿನಲ್ಲಿ ಸೇರಿಕೊಳ್ಳುತ್ತಾರೆ. ನಾನು ಕೈ ಮುಂದೆ ಮಾಡುತ್ತೇನೆ. ಆದರೆ ಅಲ್ಲಿಯವರೆಗೆ ತಲುಪುತ್ತಿಲ್ಲ ಮತ್ತು ನನಗೆ ಹಿಂದಿನಿಂದ ಧ್ವನಿಗಳು ಬರಲಾರಂಭಿಸುತ್ತವೆ ನೀನು ಅಲ್ಲಿಯವರೆಗೆ ತಲುಪಲು ಸಾಧ್ಯವಿಲ್ಲ. ಈ ಸ್ವಪ್ನದ ನಂತರ ನನ್ನಲ್ಲಿ ಇನ್ನು ಕಳವಳ ಉಂಟಾಯಿತು. ನಾನು ಪ್ರಾರ್ಥಿಸಿದೆ. ಹಾಗೂ Toll Free ಸಂಖ್ಯೆಗೆ ಸಂಪರ್ಕಿಸಿ ತಮ್ಮ ಅನುಮಾನಗಳನ್ನು ದೂರ ಮಾಡಿಕೊಂಡೆ. ಅದೇ ದಿನ ಇನ್ನೊಂದು ಸ್ವಪ್ನ ಬಂತು. ಒಂದು ಗುಂಪು ಇದೆ. ಅದು ಮಸ್ಜಿದ್ ಅಬ್ಬಾ ಕಡೆ ಹೋಗುತ್ತಿದೆ. ಯಾರೊ ಒಬ್ಬರು ಹೇಳುತ್ತಿದ್ದಾರೆ. ನೀನು ತಲುಪಲು ಸಾಧ್ಯವಿಲ್ಲ. ಆದರೂ ನಾನು ಪ್ರಯತ್ನ ಮಾಡುತ್ತಿದ್ದೇನೆ. ಮತ್ತು ಆ ಗುಂಪಿನಲ್ಲಿ ತೂರಿಕೊಂಡೆ ಮತ್ತು ಬೈಅತ್ತಿನ ಅದೇ ಮೊದಲು ನೋಡಿದ ದೃಶ್ಯ ಕಂಡೆನು. ಮತ್ತೆ ನಾನು ಬೈಅತ್ ಮಾಡಲು ತನ್ನ ಕೈ ಮುಂದೆ ಮಾಡಿದೆನು. ಆಗ ಖಲೀಫತುಲ್ ಮಸೀಹ್ ನನ್ನ ಕಂಕುಳ (ಕಲಾಯಿ) ವನ್ನು ಹಿಡಿದು ತನ್ನ ಕೈಯಲ್ಲಿ ಸೇರಿಸಿಕೊಂಡರು. ಈ ಸ್ವಪ್ನದ ನಂತರ ನಾನು ಖಾದಿಯಾನ್ ನೋಡಲು ಹೋದೆ ಮತ್ತು ತುಂಬ ಪ್ರಭಾವಿತನಾದೆ. ಆದರೆ ಕೆಲವು ವೈಯಕ್ತಿಕ ಕಾರಣಗಳಿಂದಾಗಿ ಬೈಅತ್ ಮಾಡವ ಸಾಹಸ ಮಾಡಲಾಗಲಿಲ್ಲ. ಮತ್ತೆ ಕೆಲ ಅವಧಿಯ ನಂತರ ಸಂಪರ್ಕವೂ ಇರಲಿಲ್ಲ. ಸಮಯ ಹೀಗೆ ಕಳೆಯುತ್ತಿತ್ತು. ಆದರೆ ನಾನು ಕನಸುಗಳನ್ನು ಕಂಡಿದ್ದೆ. ಮತ್ತು ಅಹ್ಮದಿ ಬಾಂದವರೊಡನೆ ಕೆಲ ತಳಮಳ ಆಗುತ್ತಿತ್ತು. ಹೇಳುತ್ತಾರೆ. ಅಂತಿಮವಾಗಿ ಒಂದು ದೀರ್ಘ ಅವಧಿಯ book fair ನಲ್ಲಿ ಅಹ್ಮದಿಯಾ ಜಮಾಅತಿನ ಒಂದು ಸ್ಟಾಲ್ ಇತ್ತು. ಅಲ್ಲಿ ಪೂರ್ಣ ನೆಮ್ಮದಿಯಿಂದ ಸ್ವಪ್ನಗಳ ಆಧಾರದ ಮೇಲೆ ಬೈಅತ್ ಮಾಡಿ ಜಮಾಅತಿನಲ್ಲಿ ಸೇರಿಕೊಂಡೆ.

ಮಾಲಿಯ ಅಮೀರ್ ಸಾಹೇಬರು ಬರೆಯುತ್ತಾರೆ. ಮಾಲಿ ಕ್ಷೇತ್ರದ ಕೋಲಿಕೋಕ ಎಂಬ ಒಂದು ಊರಿನಲ್ಲಿ ಈ ವರ್ಷ ಜಮಾಅತ್ ಸ್ಥಾಪನೆಯಾಯಿತು. ಇದಕ್ಕಿಂತ ಮೊದಲು ಅಲ್ಲಿಯ ಜನರು ನಾಸ್ತಿಕರಾಗಿದ್ದರು. ಅವರು ಧರ್ಮವನ್ನೇ ನಂಬುತ್ತಿರಲಿಲ್ಲ. ಆದರೆ ಅಲ್ಲಾಹನ ಅನುಗ್ರಹದಿಂದ ಅವರು ನಮ್ಮ ಪ್ರಚಾರದ ಫಲವಾಗಿ ಅಹ್ಮದಿಯತ್ ಸ್ವೀಕರಿಸಿದರು. ಈ ಊರಿನಲ್ಲಿ ಮಸೀದಿ ಇರಲಿಲ್ಲ. ಈಗ ಅಹ್ಮದಿಯಾ ಜಮಾಅತ್ ಅಲ್ಲಿ ಮಸೀದಿಗಳು ನಿರ್ಮಿಸುತ್ತಿದೆ. ಮಸೀದಿಗೆ ಅಡಿಪಾಯ ಹಾಕುವ ಸಂದರ್ಭದಲ್ಲಿ ಅಲ್ಲಿಯ Chief (ಮುಖ್ಯಸ್ಥರು) ಹೇಳಿದರು. ನಾವು ದೀರ್ಘ ಸಮಯದಿಂದ ಇಮಾಮ್ ಮಹದಿಯ ಜಮಾಅತ್ತಿನ ನಿರೀಕ್ಷೆಯಲ್ಲಿದ್ದೇವೆ. ಮತ್ತು ಅವರು ಹೇಳಿದರು. ಇದು ನಮ್ಮ ಸೌಭಾಗ್ಯವಾಗಿದೆ. ಅಲ್ಲಾಹನು ನಮಗೆ ನಮ್ಮ ಜೀವನದಲ್ಲಿ ಅಹ್ಮದಿಯತ್ ಸ್ವೀಕರಿಸುವ ಭಾಗ್ಯ ನೀಡಿದೆ. ಏಕೆಂದರೆ ನಮ್ಮ ತಂದೆಯವರು ಇಮಾಮ್ ಮಹದಿಯ ನಿರೀಕ್ಷೆಯಲ್ಲಿದ್ದರು. ಆದರೆ ಅವರ ಜೀವಿತದಲ್ಲಿ ಅದರ ಸಂದೇಶವೆ ತಲುಪಿರಲಿಲ್ಲ.

ಘಾನಾದ ನಾರ್ಥೆ ರೀಜನ್ನಿನ ಮುಬಲ್ಲಿಗ್‌ರು ಬರೆಯುತ್ತಾರೆ. ನಿಸ್ವಾನ ಎಂಬ ಒಂದು ಕ್ಷೇತ್ರವಿದೆ. ಅಲ್ಲಿ ಅಹ್ಲೆ ಸುನ್ನತ್ ಅವರ ಪ್ರಾಬಲ್ಯವಿದೆ. ಉತರದಲ್ಲಿ ಮುಸ್ಲಿಂ ಬಾಹುಳ್ಯವಿದೆ. ಅಲ್ಲಿಯ ಸುನ್ನಿಗಳು ಬಹಳ ವಿರೋಧಿಗಳಾಗಿದ್ದಾರೆ. ಅವರ Egypt (ಮಸರ್) ನಿಂದ ಒಬ್ಬ ಆಸಮ್‌ನನ್ನು ಫೆಬ್ರವರಿ 2019 ರಂದು ಕರೆ ತಂದರು. ಏಕೆಂದರೆ ಎಲ್ಲೆಲ್ಲಿ ಅಲಾಸ್ ಜಮಾಅತುಗಳು ಸ್ಥಾಪನೆಯಾಗಿದೆಯೋ ಅಲ್ಲಲ್ಲಿ ಸುನ್ನತ್ ಮಸೀದಿಗಳನ್ನು ಸ್ಥಾಪಿಸಬೇಕೆಂದು ಮತ್ತು ನೀರಿನ ನಲ್ಲಿ ಹಾಕಬೇಕೆಂದು, ಏಕೆಂದರೆ ಅಹ್ಮದಿಯರು ನಲ್ಲಿ ಹಾಕಿಸಿದ್ದಾರೆ. ಅದನ್ನು ಬಿಟ್ಟು ಬಿಡುವಂತೆ ಆಗಬೇಕೆಂದು ಅವರು ಬಯಸುತ್ತಿದ್ದರು. ಅಲ್ಲಿ ಅವರು ಇಮಾಮರನ್ನು ಸಹ ನೇಮಿಸಿದರು. ಅವರು ಮೂರು ನೂರು ಸಿ.ಡಿ (ಅಲ್ಲಿಯ ಕರೆನ್ಸಿ) ನಿಗದಿ ಪಡಿಸಿದರು. ಮಿಸ್ರಿ ಪಂಡಿತನು ತನಗಾಗಿ 7 ನೂರು ಸಿ.ಡಿ ಯಲ್ಲಿ ಒಬ್ಬ ಪ್ರತಿನಿಧಿಯನ್ನು ಇಟ್ಟುಕೊಂಡನು. ಹೀಗೆ ಆ ಜನರು ಎಲ್ಲ ಕ್ಷೇತ್ರಗಳ ವೀಕ್ಷಣೆ ಮಾಡತೊಡಗಿದರು. ರಂಝಾನ್ ತಿಂಗಳಿನ ಪ್ರಾರಂಭದಲ್ಲಿ ಪ್ರತಿನಿಧಿಯು ಮಿಸ್ರಿ ಪಂಡಿತನ ಹಣ ಕದ್ದಿದನು. ಮಿಸ್ರಿ ಪಂಡಿತನು ಹಣವು ತಂದಿದ್ದನು. ಮಿಸ್ರಿ ಪಂಡಿತನಗೆ ನಿಯುಕ್ತರಿಂದ ಪ್ರತಿನಿಧಿಗೆ ಪಂಡಿತನಿಗಿಂತ ಹೆಚ್ಚು ಸಂಬಳ ಸಿಗುತ್ತಿತ್ತು. ಅಂತೂ ತುಂಬ ಹಣ ಸಂಗ್ರಹವಾಗಿತ್ತು. ಇಸ್ಲಾಂ ಅಹ್ಮದಿಯತ್ ವಿರೋಧ ಮಾಡುವ ವಿವಿಧ ಸರಕಾರಗಳು ಅವರಿಗೆ ಸಹಾಯವು ನೀಡುತ್ತಿದ್ದವು. ಹೀಗೆ ಅವರ ಪ್ರತಿನಿಧಿ ಅವರ ಹಣ ದೋಚಿಕೊಂಡು ಹೋದನು. Egypt ನಿಂದ ಬಂದ ಆ ಪಂಡಿತ ಕದ್ದ ಹಣವನ್ನು ವಾಪಾಸ್ಸು ಕೊಡಲು ಪಂಡಿತನು ಅವನಿಂದ ಬೇರ್ಪಟ್ಟನು. ಅವನ ಮಸೀದಿಯಿಂದ ಹಲ್ಲೆ ಮಾಡಿದನು. ಅದರಿಂದ ಅವರು ಹೆದರಿ ತನ್ನ ದೇಶಕ್ಕೆ ಪಲಾಯನ ಮಾಡಿದರು. ಹೀಗೆ ಅಲ್ಲಾಹನು ಅವನ ಅಹ್ಮದಿಯತ್ತನ್ನು ಕೊನೆಗಾಣಿಸಲು ಬಂದವನನ್ನು ಸ್ವಯಂ ಓಡಿ ಹೋಗುವಂತೆ ಮಾಡಿದನು.

* ಲೈಬೇರಿಯಾದ ಬೂಮಿಕೌಂಟಿಯ ಮುಬಲ್ಲಿಗರು ಬರೆಯುತ್ತಾರೆ. ಯಾವ ರೀತಿ ಅಹ್ಮದಿಯತ್ತಿನ ವಿರೋಧಿಗಳು ತಮ್ಮ ಕೃತ್ಯಗಳಿಂದ ಅಸಫಲತೆ ಹಾಗೂ ದುಷ್ಪರಿಣಾಮಗಳಿಗೆ ಗುರಿಯಾಗುತ್ತಿದ್ದಾರೆ ಎಂದು. ನಾವು ಒಂದು ಊರು ಬೇಫ್ಯನಿನಲ್ಲಿ ಪ್ರಚಾರ ಮಾಡಲು ಹೋಗಬೇಕೆಂದು, ಆ ಕ್ಷೇತ್ರ ಕೇಂದ್ರ ಸ್ಥಾನವನ್ನು ಪಡೆದಿದೆ. ಪ್ರಚಾರದ ನಂತರ ಅವರಿಗೆ ಮಾರ್ಚ್ 2019 ರ ಜಲ್ಸ ಸಾಲಾನ ಲಾಯ್‌ಬೇರಿಯಾದಲ್ಲಿ ಭಾಗವಹಿಸಲು ಹೇಳಿದೆವು. ಆದ್ದರಿಂದ ಇಲ್ಲಿಯ ಜನರ ಒಂದು ತಂಡ ಜಲ್ಸ ಸಾಲಾನದಲ್ಲಿ ಭಾಗವಹಿಸಿದ್ದರು. ಅವರಲ್ಲಿ ಅವರ ಇಮಾಮರು ಮತ್ತು ಮೂವರು ಪೆರಾಮೆಂಟ್ ಚೀಫ್ ಭಾಗವಹಿಸಿದ್ದರು. ನಮ್ಮ ಪ್ರಚಾರ ಮತ್ತು ಜಲ್ಸದ ವಾತಾವರಣ ನೋಡಿ ಬೈಅತ್ ಮಾಡುವ ಘೋಷಣೆ ಮಾಡಿದರು. ನೌಮಬಾಯಿನರ ತರಬೇತಿಗೋಸ್ಕರ ಅಲ್ಲಿ ಒಬ್ಬ ಮುಅಲ್ಲಿಮರನ್ನು ನೇಮಿಸಲಾಯಿತು. ಅಲ್ಲಿ ಅವರು ಹೋಗುತ್ತಲೇ ಖುರ್‌ಆನ್ ಕ್ಲಾಸ್ ಪ್ರಾರಂಭಿಸಿದರು. ಮಕ್ಕಳಿಗೆ ನಮಾಝ್ ಹಾಗೂ ಇತರ ಧರ್ಮಜ್ಞಾನ ನೀಡಲು ಪ್ರಾರಂಭಿಸಿದರು. ವಿರೋಧಿಗಳ ಗಮನಕ್ಕೆ ಇಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪನೆಗೊಂಡ ವಿಷಯ ತಿಳಿಯಿತು. ಅವರು ಒಂದು ಗುಂಪು ಕಟ್ಟಿಕೊಂಡು ಆ ಊರಿಗೆ ಹೋಗುವ ಕಾರ್ಯಕ್ರಮ ಇಟ್ಟುಕೊಂಡರು. ಅದಕ್ಕೆ ಅಹ್ಮದಿಯೇತರ ಒಬ್ಬ ಚೀಫ್ ಇಮಾಮ್ ಮುಂದಾಳತ್ವ ವಹಿಸಿದ್ದರು. ಅವರು ಅಲ್ಲಿ ತಲುಪಿ ಅಹ್ಮದಿಯರು ಒಳ್ಳೆಯ ಮುಸ್ಲಿಮರಲ್ಲ ಎಂದು ವಾದಿಸಲು ತೊಡಗಿದರು. ಮೊದಲು ಪೀರ್‌ಮೌಂಟ್ ಚೀಫ್ ತುಂಬ ಸಮ್ಯಮದಿಂದ ಕೇಳಿದರು. ಅಹ್ಮದಿಯರು ಯಾವ ಕಾರಣದಿಂದ ಒಳ್ಳೆಯ ಮುಸ್ಲಿಮರಲ್ಲ ಎಂದು ಹೇಳುತ್ತಿದ್ದೀರಿ. ಆಗ ಮೌಲ್ವಿ ಹೇಳಿದ. ಅವರು ಖುರ್‌ಆನ್‌ನ ಮೇಲೆ ವಿಶ್ವಾಸ ಇಡುವುದಿಲ್ಲ. ಅವರು ನಿಮಗೆ ಮೂರ್ಖರನ್ನಾಗಿ ಮಾಡುತ್ತಿದ್ದಾರೆ. ನಾವು ಖುರ್‌ಆನ್‌ಗೆ ನಂಬುತ್ತೇವೆ ಎಂದು. ಆಗ ಚೀಫ್ ಕೋಪಗೊಂಡು ಹೇಳಿದರು. ಹಿಂದಿನ 20 ವರ್ಷಗಳಿಂದ ಯಾರೂ ನಮಗೆ ಖುರ್‌ಆನ್ ಹೇಳಿಕೊಡಲು ಬಂದಿಲ್ಲ. ಈಗ ಅಹ್ಮದಿಯರು ಬಂದಿದ್ದಾರೆ. ನಮಗೆ ಧರ್ಮಜ್ಞಾನ ನೀಡುತ್ತಿದ್ದಾರೆ. ಖುರ್‌ಆನ್ ಕಲಿಸುತ್ತಿದ್ದಾರೆ. ಅದನ್ನು ತಡೆಯಲಿಕ್ಕೆ ಈಗ ಇಲ್ಲಿ ಬಂದಿರೇನು. ಅಹ್ಮದಿಯರು ನಮಗೆ ಮೂರ್ಖರನ್ನಾಗಿ ಮಾಡುತ್ತಿಲ್ಲ. ಬದಲಾಗಿ ನೀವು ಮೂರ್ಖರನ್ನಾಗಿ ಮಾಡಲು ಬಂದಿರಿ. ಆದ್ದರಿಂದ ತಕ್ಷಣದಿಂದ ನೀವು ಇಲ್ಲಿಂದ ಹೊರಟು ಹೋಗಿರಿ ಮತ್ತು ಮುಂದೆ ಎಂದೂ ಇಲ್ಲಿ ಕಾಲಿಡಬಾರದು. ನಾವು ಇಂದು ಸಹ ಅಹ್ಮದಿಯಾ ಜಮಾಅತಿನೊಂದಿಗೆ ಇದ್ದೀವಿ. ಮುಂದೆಯೂ ಇರುತ್ತೇವೆ. ಹೀಗೆ ವಿರೋಧಿಗಳು ಯಶಸ್ಸು ದೊರೆಯದೇ ಹಿಂದಿರುಗಿದರು. ಈಗ ಆ ಊರಿನ ಜನರು ಮೊದಲಿಗಿಂತ ಆತ್ಮೀಯ ಜ್ಞಾನವನ್ನು ಮತ್ತು ಆದರ್ಶ ಮಾದರಿಯನ್ನು ತೋರಿಸುತ್ತಿದ್ದಾರೆ. ವಿಧಿಬದ್ಧ ರೀತಿಯಲ್ಲಿ ಚಂದಾ ವ್ಯವಸ್ಥೆಯಲ್ಲೂ ಶಾಮೀಲಾಗಿರುವರು.

ಹುಝೂರ್(ಅಬಿಅ) ಹೇಳಿದರು. ಹಝ್‌ರತ್ ಮಸೀಹ್ ಮೌಊದ್ ಹೇಳುತ್ತಾರೆ. ಅಲ್ಲಾಹನು ತನ್ನ ಭಕ್ತದಾಸರನ್ನು ರಕ್ಷಿಸುತ್ತಾನೆ. ಶತ್ರುಗಳು ಅವರನ್ನು ನಾಶಪಡಿಸ ಬಯಸುತ್ತಾರೆ. ಆದರೆ ಅವರು ದಿನೇ ದಿನೇ ಅಭಿವೃದ್ಧಿ ಹೊಂದುತ್ತಾರೆ. ಮತ್ತು ನಮ್ಮ ಶತ್ರುಗಳ ಮೇಲೆ ವಿಜಯ ಸಾಧಿಸುತ್ತಾರೆ. ಅಲ್ಲಾಹನು ವಾಗ್ದನ ನೀಡಿದ್ದಾನೆ. ನಾನು ಮತ್ತು ನನ್ನ ಪ್ರವಾದಿಗಳು ವಿಜಯಶಾಲಿಯಾಗುವರು ಎಂಬ ವಿಧಿ ಬರೆಯಲ್ಪಟ್ಟಿದೆ. ಅಲ್ಲಾಹನೊಂದಿಗೆ ಸಂಬಂಧ ಹೊಂದಿದವರು ಪ್ರಾರಂಭದಲ್ಲಿ ಅವನ ದೃಷ್ಟಿಯಲ್ಲಿ ದುರ್ಬಲವಾಗಿಯೂ, ಬಲಹೀನವಾಗಿಯೂ ಇರುತ್ತಾರೆ. ಆದರೆ ಅಲ್ಲಾಹನೊಂದಿಗೆ ತನ್ನ ಸಂಬಂಧ ದೃಢಗೊಳಿಸುತ್ತಿರುವಂತೆಯೇ ಅವನ ಅಭಿವೃದ್ಧಿ ಮತ್ತು ಖ್ಯಾತಿ ಪ್ರಬಲವಾಗುತ್ತದೆ ಮತ್ತು ಅವನು ಸಜ್ಜನನಾಗುತ್ತಾನೆ. ಮತ್ತೆ ಅವರು ಹೇಳುತ್ತಾರೆ. ನಾನು ಅಲ್ಲಾಹನಿಂದ ನಿಶ್ಚಿತವಾದ ಜ್ಞಾನ ಹೊಂದಿ ಹೇಳುತ್ತೇನೆ. ಇವೆಲ್ಲ ಮೌಲ್ವಿಗಳು ಮತ್ತು ಅವರ ಸಜ್ಜಾದ ನಶೀನ್‌ಗಳು ಅವರ ಮುಲ್‌ಹಿಮ್ (ದೇವಪುರುಷರು) ಒಟ್ಟುಗೂಡಿ ದೇವಸಾನಿಧ್ಯದಲ್ಲಿ ನನ್ನೊಂದಿಗೆ ಸ್ಪರ್ಧಿಸ ಬಯಸಿದರೆ (ದೇವವಾಣಿ ನಿಮಿತ್ತ) ಅವರ ಎದುರಿನಲ್ಲಿ ನನಗೆ ಜಯ ನೀಡುವವನು. ಏಕೆಂದರೆ ನಾನು ದೇವನಕಡೆಯಿಂದ ಆಗಿದ್ದೇನೆ.

ಹುಝೂರ್(ಅಬಿಅ) ಹೇಳಿದರು. ಆದ್ದರಿಂದ ನಿಶ್ಚಯವಾಗಿಯೂ ಈಗ ಇಸ್ಲಾಮಿನ ವಿಜಯವು ಮಸೀಹ್ ಮೌಊದ್(ಅ) ಅವರಿಂದಲೇ ದೊರೆಯುವುದು. ಅಲ್ಲಾಹನು ಈ ವಿಜಯ ನೀಡುವವನಾಗಿದ್ದಾನೆ. ಆ ದೃಷ್ಟಾಂತಗಳನ್ನು ನಾವು ಕಾಣುತ್ತಿದ್ದೇವೆ. ಕೆಲವು ಅದ್ಭುತವಾದ ದೃಷ್ಟಾಂತಗಳನ್ನು

ನಿಮ್ಮ ಮುಂದೆ ವಿವರಿಸಿದ್ದೇನೆ. ಯಾವ ಯಾವ ರೀತಿಯಲ್ಲಿ ಅಲ್ಲಾಹನು ಜನರಿಗೆ ಮಾರ್ಗದರ್ಶನವನ್ನು ನೀಡುತ್ತಿದ್ದಾನೆ. ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಜಮಅತಿನಲ್ಲಿ ಬಂದು ಸೇರುತ್ತಿದ್ದಾರೆ. ಆದರೆ ಹಳೆಯ ಅಹ್ಮದಿಯರಾದ ನಾವು ಅಹ್ಮದಿಯತ್ತಿನಲ್ಲಿ ಬಂದು ಒಂದು ಕಾಲವನ್ನು ಕಳೆದಿದ್ದೇವೆ. ಈ ಅನುಗ್ರಹಗಳಿಗೆ ಪಾತ್ರರಾಗಬಯಸುವುದಾದರೆ ಅದಕ್ಕೆ ಸಂಬಂಧಪಟ್ಟವರಾಗ ಬಯಸುವುದಾದರೆ ನಮಗೂ ಈ ಸಂದೇಶ ತಲುಪಿಸಲು ಮುಖ್ಯ ಪಾತ್ರ ವಹಿಸಬೇಕಾಗುತ್ತದೆ. ಅದೇ ರೀತಿ ಹೊಸದಾಗಿ ಬರುವವರು ಈ ಅನುಗ್ರಹಗಳಿಗೆ ಪಾತ್ರರಾಗಲು ತಮ್ಮ ಸುಧಾರಣೆಗೆ ಕಾರಣರಾದ ಮತ್ತು ಸತ್ಪಥಕ್ಕೆ ಮಾರ್ಗದರ್ಶಕವಾದ ಈ ಸಂದೇಶವನ್ನು ಇತರರಿಗೆ ತಲುಪಿಸಲು ಮತ್ತು ಪ್ರಚಾರ ಮಾಡಲು ಭಗೀರಥ ಪ್ರಯತ್ನ ಮಾಡಬೇಕಾಗಿದೆ. ಅಲ್ಲಾಹನು ಎಲ್ಲರಿಗೂ ಈ ಭಾಗ್ಯ ದಯಪಾಲಿಸಲಿ. ಅಲ್ಲಾಹನ ಮಸೀಹರಿಗೆ ಸಹಾಯಕರಾಗಿ ನಾವು ಅಲ್ಲಾಹನ ಔದಾರ್ಯ ಕಾರುಣ್ಯಗಳಿಗೆ ಪಾತ್ರರಾಗುವಂತಾಗಲಿ.

ಹುಝೂರ್ ಅನ್ವರ್ ಅವರ ಈ ಭಾಷಣ 5 ಗಂಟೆ 15 ನಿಮಿಷಗಳವರೆಗೆ ಜಾರಿಯಲ್ಲಿತ್ತು. ದುಆ ನಂತರ ಹುಝೂರ್ ಜಲ್ಸದ ಒಟ್ಟು ಹಾಜರಿಯನ್ನು ಘೋಷಿಸಿದರು. ಅಮೀರ್ ಸಾಹೇಬರಿಂದ ಪಡೆದ ವರದಿಯ ಪ್ರಕಾರ ಫ್ರಾನ್ಸ್ ಜಮಾಅತಿನ ಹಾಜರಿ 1441 ಇದೆ. ಅಹ್ಮದಿಯೇತರರ ಹಾಜರಿ 130 ಇದೆ. ಪುರುಷರ ಒಟ್ಟು ಹಾಜರಿ 1638 ಮಹಿಳೆಯರ ಹಾಜರಿ 1095 ಇದೆ. ಹೀಗೆ ಒಟ್ಟು ಹಾಜರಿ 2733 ಆಗಿರುತ್ತದೆ. ಇಲ್ಲಿಯೂ ನೆರೆಯ ಮತ್ತು ಇತರ 21 ದೇಶಗಳು ಪ್ರತಿನಿಧಿಸಿವೆ. ಪ್ರಾರ್ಥನಾ ಕವನಗಳು ಮತ್ತು ಇತರ ಕವನಗಳು ಪ್ರಸ್ತುತಪಡಿಸಿದರು. ಮೊಟ್ಟ ಮೊದಲು ಅರೇಬಿಯಾದ ಯುವಕರು ಅರೇಬಿಯಾ ಭಾಷೆಯಲ್ಲಿ ಖಸೀದ ಪ್ರಸ್ತುತಪಡಿಸಿದರು. ಅನಂತರ ಖುದ್ದಾಮ್ ಉರ್ದು ಭಾಷೆಯಲ್ಲಿ ಒಂದು ಪ್ರಾರ್ಥನ ಕವನ ಹೇಳಿದರು. ಅನಂತರ ಬಂಗಾಳಿ ಯುವಕರು ಬಾಂಗ್ಲಾ ಭಾಷೆಯಲ್ಲಿ ಒಂದು ಕವನ ಪ್ರಸ್ತುತಪಡಿಸಿದರು. ಅನಂತರ ಅತ್‌ಫಾಲುಲ್ ಅಹ್ಮದಿಯಾ ಫ್ರಾನ್ಸ್ ಗುಂಪು ಮಧುರ ಕಂಠದಿಂದ ಕವನ ರಚಿಸಿದರು.

**'ಹಮ್ ಅಹ್ಮದಿ ಬಚ್ಚೆ ಹೈಂ ಕುಚ್ ಕರ್‌ಕೇ ದಿಖಾಯೆಂಗೆ**
**ಶೈತಾನ್ ಕೀ ಹುಕೂಮತ್ ಕೋ ದುನಿಯಾ ಸೇ ಮಿಟಾಯೆಂಗೆ**
**ಪ್ರಸ್ತುತಪಡಿಸಿದರು.'**

ಅನಂತರ ಖುದ್ದಾಮರ ಇನ್ನೊಂದು ಗುಂಪು ಪಂಜಾಬಿ ಭಾಷೆಯಲ್ಲಿ ಒಂದು ಕವನ ಪ್ರಸ್ತುತಪಡಿಸಿದರು. ಅನಂತರ ವಾಖಿಫೀನ್ ನೌ ಗುಂಪು ತಮ್ಮ ವಿಶಿಷ್ಠ ಶೈಲಿಯಲ್ಲಿ ಕಲಿಮ ತಯ್ಯಿಬ ಕವನ ರೂಪದಲ್ಲಿ ಪ್ರಸ್ತುತ ಪಡಿಸಿ ಘೋಷಣೆ ಕೂಡಗೊಡಗಿದರು. ಈ ಕಾರ್ಯಕ್ರಮದ ನಂತರ ಹುಝೂರ್(ಅಬಿಅ) ತಮ್ಮ ವಸತಿಯತ್ತ ತೆರಳಿದರು.

**ಕುಟುಂಬ ಭೇಟಿಗಳು**

ಕಾರ್ಯಕ್ರಮದ ಅನ್ವಯ 6:15 ಗಂಟೆಗೆ ಹುಝೂರ್(ಅಬಿಅ) ತಮ್ಮ ಕಚೇರಿಗೆ ಆಗಮಿಸಿದರು. ಮತ್ತು ಕುಟುಂಬಗಳ ಭೇಟಿ ಪ್ರಾರಂಭವಾಯಿತು. ಸಂಜೆಯ ಈ ಭಾಗದಲ್ಲಿ 32 ಕುಟುಂಬಗಳ 107 ಬಾಂಧವರು ತಮ್ಮ ಪ್ರಿಯ ಇಮಾಮರನ್ನು ಭೇಟಿಯಾಗುವ ಭಾಗ್ಯ ಪಡೆದರು.

ಪ್ರತಿಯೊಬ್ಬರು ಸರತಿಯಂತೆ ಭಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ಪಡೆದರು. ಆತ್ಮೀಯವಾಗಿ ಹುಝೂರ್(ಅಬಿಅ) ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೇಖನಿ ನೀಡಿದರು ಮತ್ತು ಚಿಕ್ಕ ಮಕ್ಕಳಿಗೆ ಚಾಕೋಲೇಟ್ ನೀಡಿದರು.

ಭೇಟಿಯಾಗುವವರಲ್ಲಿ ತ್ಯುನಿಸ್‌ಗೆ ಸಂಬಂಧಪಟ್ಟವರಾದ ಓರ್ವ ಮಿತ್ರರಾದ ಖಲೀಲ್ ಅಸ್ವಾಯಿ ಸಾಹಿಬ್ ಉಪಸ್ಥಿತರಿದ್ದರು. ಅವರು ಹುಝೂರ್(ಅಬಿಅ) ಶುಭ ಹಸ್ತದಲ್ಲಿ ಬೈಅತ್ ಮಾಡುವ ಭಾಗ್ಯ ಪಡೆದರು. ಹೇಳಿದರು. ಕೆಲ ವರ್ಷಗಳ ಹಿಂದೆಯೇ ನಾನು ಬೈಅತ್ ಮಾಡಿದ್ದೆ. ಆದರೆ ಇಂದು ಜೀವನದಲ್ಲಿ ಮೊದಲ ಬಾರಿಗೆ ಹುಝೂರ್(ಅಬಿಅ) ರವರ ಶುಭಹಸ್ತದಲ್ಲಿ ಬೈಅತ್ ಮಾಡಿರುತ್ತೇವೆ. ನಾನು ಒಬ್ಬ ಮುಸಲ್ಮಾನ ಮನೆತನದಲ್ಲಿ ಜನ್ಮ ತಾಳಿದ್ದೆ. ಆದರೆ ಇಂದು ನನಗೆ ಹೊಸ ಜನ್ಮ ಲಭಿಸಿದಂತೆ ಭಾಸವಾಗುತ್ತಿದೆ. ನಾನು ಹುಝೂರ್‌ರನ್ನು(ಅಬಿಅ) ನೋಡುವಾಗ ಓರ್ವ ದೇವದೂತರನ್ನು ಕಾಣುವಂತಾಗುತ್ತಿತ್ತು. ಭೇಟಿಗಳ ಈ ಕಾರ್ಯಕ್ರಮವು 8 ಗಂಟೆಯವರೆಗೆ ಜಾರಿಯಲ್ಲಿತ್ತು.

ಅನಂತರ ಹುಝೂರ್(ಅಬಿಅ) ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಆಮೀನ್ ಸಮಾರಂಭ ಜರುಗಿಸಬೇಕಾಗಿತ್ತು.

**ಆಮೀನ್ ಸಮಾರಂಭ**

ಹುಝೂರ್(ಅಬಿಅ) ಕೆಳಗೆ ನಮೂದಿಸಿದ ಬಾಲಕ ಬಾಲಕಿಯರಿಂದ ಪವಿತ್ರ ಖುರ್‌ಆನಿನ ಒಂದೊಂದು ವಚನ ಆಲಿಸಿ ಕೊನೆಯಲ್ಲಿ ದುಆ ಮಾಡಿಸಿದರು. ಆಮೀನ್ ಸಮಾರಂಭದಲ್ಲಿ ಭಾಗವಹಿಸಿದ ಅದೃಷ್ಟವಂತ ಬಾಲಕ ಬಾಲಕಿಯರ ಹೆಸರುಗಳು ಇಂತಿವೆ.

ಆಮೀನ್ ಸಮಾರಂಭದ ನಂತರ ಹುಝೂರ್(ಅಬಿಅ) ಮಗ್ರಿಬ್ ಹಾಗೂ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆ ನಂತರ ತಮ್ಮ ವಸತಿಗೆ ತೆರಳಿದರು.

**ನವ ಅಹ್ಮದಿಯರ ಅನಿಸಿಕೆಗಳು**

ಇಂದು ಬೈಅತ್ ಮಾಡಿದ ಕೆಲ ನವ ಅಹ್ಮದಿಯರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಕಮೋರೋಝ್ (Comoroseis) ಗೆ ಸಂಬಂಧಿಸಿದ ಓರ್ವ ನವ ಅಹ್ಮದಿ ಹೇಳಿದರು. ಅಹ್ಮದಿಯಾ ಜಮಾಅತ್ ಪುರಾವೆ ಸಹಿತ ವಾದಿಸುತ್ತದೆ ಮತ್ತು ಮನವರಿಕೆ ಮಾಡಿಸುತ್ತದೆ. ನಿಮಗೆ ಕೇವಲ ಪಂಡಿತರು ಹೇಳಿದ ಅದಕ್ಕೆ ಹೀಗೆ ಮಾಡಬೇಕಾಗಿದೆ ಎಂದಿಲ್ಲ. ಇಂದು ನಾನು ಖಲೀಫತುಲ್ ಮಸೀಹ್ ಕೈಯಲ್ಲಿ ಬೈಅತ್ ಮಾಡಿಸಿದ್ದೇನೆ. ನನಗೆ ತುಂಬ ಶಾಂತಿ ದೊರೆತಿದೆ.

ಫ್ರಾನ್ಸ್‌ನ ಓರ್ವ ನವ ಅಹ್ಮದಿ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ನನಗೆ ನೇರವಾಗಿ ಹುಝೂರ್(ಅಬಿಅ) ಅವರ ಕೈಯಲ್ಲಿ ಬೈಅತ್ ಮಾಡುವ ಭಾಗ್ಯ ದೊರೆತಿದೆ. ಇದು ನನ್ನ ಜೀವನದ ಭಾವಪೂರ್ಣ ಪವಾಡವಾಗಿದೆ.

ನವ ಅಹ್ಮದಿ ಮಹಿಳೆಯೋರ್ವರಾದ The reason commissioner ಸಾಹಿಬ ತನ್ನ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಮೊದಲು ನಾನು ಆಫ್ರಿಕಾದಲ್ಲಿದ್ದೆ. ಧರ್ಮಾಭಿಮಾನಿಯಾಗಿದ್ದೆ. ಆದರೆ ಯೂರೋಪಿಗೆ ಬಂದ ನಂತರ ನಿರ್ಧರಿಸಿ ಧರ್ಮದಿಂದ ದೂರವಾಗತೊಡಗಿದೆ. ಜಲ್ಸದಲ್ಲಿ ಬರುವ ಮೊದಲು ಅನಾರೋಗ್ಯದಿಂದ ಇದ್ದೆ. ಆದರೆ ಜಲ್ಸಕ್ಕೆ ಬಂದ ನಂತರ ಸ್ವಸ್ಥಳಾದೆ. ಈ ಜಲ್ಸದ ವಾತಾವರಣ ಮತ್ತೆ ನನಗೆ ಧರ್ಮದ ಆಸಕ್ತಿ ಹುಟ್ಟಿಸಿತು. ಆದ್ದರಿಂದ ನಾನು ಅಹ್ಮದಿಯಾಗಲು ನಿಶ್ಚಯಿಸಿದೆ ಮತ್ತು ಬೈಅತ್ ಮಾಡಿದೆ.

ಅವಳ ಪತಿಯು ಹೇಳಿದನು. ನನ್ನ ಪತ್ನಿಯು ಜಲ್ಸಕ್ಕೆ ಹೋಗಿ ಬೈಅತ್ ಮಾಡಿದಾಗಿನಿಂದ 5 ಸಲ ನಿಯುಮಿತವಾಗಿ ನಮಾಝ್ ನಿರ್ವಹಿಸುತ್ತಿದ್ದಾಳೆ. ಇದಕ್ಕೆ ಮೊದಲು ಆಕೆ ಮುಸಲ್ಮಾನಳಾಗಿಯೂ ಇರಲಿಲ್ಲ.

ಫ್ರಾನ್ಸ್‌ನಿಂದ ಬೈಅತ್ ಮಾಡಿದ ಮಿತ್ರರೊಬ್ಬರು ಕಮೀಸ್ ಸಾಹಿಬ ಹೇಳಿದರು. ಇಂದು ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಬೈಅತ್ ಮಾಡಿ ನಾನು ತುಂಬ ಸ್ವಸ್ಥವಾಗಿಯೂ ಶಾಂತವಾಗಿದ್ದೇನೆ. ಇನ್‌ಶಾಅಲ್ಲಾಹ್ ಮುಂದೆಯೂ ಹೀಗೆಯೇ ಇರುವೆನು.

**ಅಕ್ಟೋಬರ್ 2019 (ಸೋಮವಾರ)**

ಹುಝೂರ್(ಅಬಿಅ) ಮುಂಜಾನೆ 6 ಗಂಟೆ 45 ನಿಮಿಷಕ್ಕೆ ಆಗಮಿಸಿ ಫಜ್ರ್ ನಮಾಜ್ ನಿರ್ವಹಿಸಿದರು. ನಮಾಝ್ ನಂತರ ಹುಝೂರ್(ಅಬಿಅ) ತಮ್ಮ ವಸತಿಯತ್ತ ತೆರಳಿದರು. ಇಂದು ಕಾರ್ಯಕ್ರಮದನ್ವಯ ಬೈತುಲ್ ಅತಾ (ಜಲ್ಸ ಸ್ಥಳ) ಮಜ್ಜಿದ್ ಮುಬಾರಕ್ Saint prist ಗೆ ಪ್ರಯಾಣ ಬೆಳೆಸಬೇಕಿತ್ತು.

ಕಾರ್ಯಕ್ರಮದನ್ವಯ 11 ಗಂಟೆ 20 ನಿಮಿಷಕ್ಕೆ ಹುಝೂರ್(ಅಬಿಅ) ತಮ್ಮ ವಸತಿ ಸ್ಥಳದಿಂದ ಹೊರ ಬಂದು ದುಆ ಮಾಡಿಸಿದರು ಮತ್ತು ಆ ಸಂದರ್ಭದಲ್ಲಿ ಉಪಸ್ಥಿತರಿದ್ದ ಬಂಧು ಭಗಿನಿಯವರಿಗೆ ಅಸ್ಸಲಾಮು ಅಲೈಕುಂ ಹೇಳಿದರು. ಇಲ್ಲಿಂದ ತಂಡವು ಪ್ರಯಾಣ ಬೆಳೆಸಿತು. ಜಮಾಅತಿನ ಕೇಂದ್ರೀಯ ಮಿಷನ್ ಹೌಸ್ ದಾರುಸ್ಸಲಾಂ ಮತ್ತು ಮಸ್ಜಿದ್ ಮುಬಾರಕ್ Saint prist ಗೆ ದೂರ 60 ಕಿ. ಮೀ ನಷ್ಟಿದೆ.

ಫ್ರಾನ್ಸ್‌ನಲ್ಲಿ ಅಹ್ಮದಿಯಾ ಜಮಾಅತಿನ ಈ ಪ್ರಥಮ ಕೇಂದ್ರೀಯ ಮಿಷನ್ ಹೌಸ್ ಹಾಗೂ ಪ್ರಥಮ ಮಸ್ಜಿದ್ ಆಗಿರುತ್ತದೆ. Saint prise ಕ್ಷೇತ್ರವು ಪ್ಯಾರಿಸ್ಸಿನ ನೆರೆಯ ಕ್ಷೇತ್ರಗಳಲ್ಲಿದೆ. ಹುಝೂರ್(ಅಬಿಅ) ಅವರಿಗೆ ಸ್ವಾಗತಿಸಲು ಪ್ಯಾರಿಸಿನ ವಿವಿಧ ಜಮಾಅತುಗಳಿಂದ ಜಮಾಅತ್ ಬಾಂಧವರು ಪುರುಷ ಮಹಿಳೆಯರು ಬೆಳಿಗ್ಗೆಯಿಂದಲೇ ಬಂದಿದ್ದರು. 12 ಗಂಟೆ 20 ನಿಮಿಷಕ್ಕೆ ಹುಝೂರ್(ಅಬಿಅ) ರವರ ವಾಹನ ಮಿಷನ್ ಹೌಸ್ ಆವರಣಕ್ಕೆ ಬಂತು. ಹುಝೂರ್(ಅಬಿಅ) ಸ್ವಾಗತ ಕೋರಲು ಎಲ್ಲೆಡೆಯಿಂದ ಕೈಗಳು ಬೀಸತೊಡಗಿದವು. ಅಂತೆಯೇ ಬಾಲಕಿಯರ ಗುಂಪು ಸ್ವಾಗತ ಗೀತೆ ಪ್ರಸ್ತುತಪಡಿಸುತ್ತಿದ್ದರು. ಅಹಲೌಂ ವ ಸಹಲಾಂ ವ ಮರ್‌ಹಬಾ ಯೂ ಅಮೀರುಲ್ ಮೂಮಿನೀನ್ ಸದ್ದು ಮೊಳಗುತ್ತಿದ್ದವು.

ಹುಝೂರ್(ಅಬಿಅ) ವಾಹನದಿಂದ ಇಳಿಯುತ್ತಿದ್ದಂತೆಯೇ ಬಾಲಕ ಅಝೀಝುಂ ಫರೀದ್ ಅಹ್ಮದ್ ಹೂಗುಚ್ಛವನ್ನು ಅರ್ಪಿಸಿದನು. ಹಾಗೆಯೇ ಬಾಲಕಿ ಆಯಿಷ ಮನ್ಸೂರ್ ಹಝ್ರತ್ ಬೇಗಂ ಸಾಹಿಬಾ (ಹುಝೂರರ ಧರ್ಮಪತ್ನಿ) ಅವರಿಗೆ ಹೂಗುಚ್ಛ ಅರ್ಪಿಸಿದರು.

ಹುಝೂರ್(ಅಬಿಅ) ತನ್ನ ಕೈಯನ್ನು ಮೇಲಕ್ಕೆತ್ತಿ ಎಲ್ಲರಿಗೂ ಅಸ್ಸಲಾಮ್ ಅಲೈಕುಂ ಹೇಳಿದರು. ಮತ್ತು ತಮ್ಮ ವಸತಿಯ ಕಡೆ ನಿರ್ಗಮಿಸಿದರು. ಮಿಷನ್

ಹೌಸ್ ಜೊತೆ ಕೆಲ ಹೊಸ ಜಾಗಗಳೂ ಇದ್ದವು. ಹುಝೂರ್(ಅಬಿಅ) ಆ ಬಗ್ಗೆ ವಿಚಾರಿಸಿದರು. ಅಮೀರ್ ಸಾಹೇಬ್ ಫ್ರಾನ್ಸ್ ಹೇಳಿದರು. ಒಂದು ಭಾಗದಲ್ಲಿ ಮಜ್ಲಿಸ್ ಅನ್ಸಾರುಲ್ಲಾಹ್ ಕಚೇರಿ ನಿರ್ಮಿಸಿದೆವು. ಇನ್ನೊಂದು ಕಡೆ Financial ಕಛೇರಿ ಹುಝೂರ್(ಅಬಿಅ) ಆ ಕಛೇರಿಯತ್ತ ತೆರಳಿದರು.

2 ಗಂಟೆ 15 ನಿಮಿಷಕ್ಕೆ ಮಸ್ಜಿದ್ ಮುಭಾರಕ್‌ಗೆ ಆಗಮಿಸಿ ನಮಾಝ್ ಝುಹರ್, ಆಸರ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿಯತ್ತ ತೆರಳಿದರು. ನಂತರ ಕಾರ್ಯಕ್ರಮದನ್ವಯ 5 ಗಂಟೆ 15 ನಿಮಿಷಕ್ಕೆ ತಮ್ಮ ಕಛೇರಿಗೆ ಆಗಮಿಸಿದರು. ಮಿಷನ್ ಹೌಸ್ ಹತ್ತಿರದ ಕ್ಷೇತ್ರ Sarcelles ದ ಡಿಸ್ಟಿ ಗೌವರ್ನರ್ Mr. Denis Doso scho Emederg ಹುಝೂರ್(ಅಬಿಅ) ರೊಡನೆ ಭೇಟಿಯಾಗಲು ಬಂದಿದ್ದರು ಅವರು ಹೇಳಿದರು. ನಾನು ಮಿಷನ್ ಹೌಸಿನ ಹತ್ತಿರದ ಕ್ಷೇತ್ರದ ಡಿಪ್ಟಿ ಗೌವರ್ನರ್ ಆಗಿರುತ್ತೇನೆ.

ಹುಝೂರ್(ಅಬಿಅ) ಹೇಳಿದರು. ನಿಮ್ಮಲ್ಲಿ ಎಷ್ಟು ಜನಸಂಖ್ಯೆ ಇದೆ. ಎಷ್ಟು ನಗರಗಳು ಮತ್ತು ಎಷ್ಟು ಗ್ರಾಮಗಳಿವೆ. ಆಗ ಗೌವರ್ನರ್ ಅವರು ಉತ್ತರಿಸಿದರು. 62 ವಿವಿಧ ನಗರಗಳು ಮತ್ತು ಗ್ರಾಮಗಳು ನನ್ನ ಅಡಿಯಲ್ಲಿ ಬರುತ್ತವೆ. ಈ ಕ್ಷೇತ್ರಗಳಲ್ಲಿ 4 ಲಕ್ಷ 72 ಸಾವಿರ ಜನರಿದ್ದಾರೆ. ಹುಝೂರ್(ಅಬಿಅ) ಕೇಳಿದ ಮಾತುಗಳಿಂದ ಅವರು ಉತ್ತರಿಸುತ್ತಾ ಹೇಳಿದರು. ಫ್ರಾನ್ಸ್‌ನಲ್ಲಿ ಈ ಹಿಂದೆ ಹೆಚ್ಚಿನ ಪ್ರೋಟೆಕ್ಷನ್ ಪ್ಯಾರಿಸ್‌ನಲ್ಲಿದ್ದರು. ಅವರ ಕ್ಷೇತ್ರಗಳು ಅತ್ಯಂತ ಕಡಿಮೆ ಇದ್ದರು. ಸ್ವಲ್ಪ ಮಟ್ಟಿಗೆ ಇದ್ದರು.

ಹುಝೂರ್(ಅಬಿಅ) ಡಿನ್ನರ್‌ಗೆ ಕೇಳಿದರು. ತುಂಬ ಗೊಂದಲಗಳಿದ್ದವು ಮತ್ತು ಜನರು ರಸ್ತೆಗೆ ಇಳಿದಿದ್ದರು. ಇದಕ್ಕೆ ಕಾರಣವೇನು? ಆಗ ಅವರು ಹೇಳಿದರು. ಇದಕ್ಕೆ ಆರ್ಥಿಕ ಕಾರಣಗಳೂ ಇವೆ. ನಿರುದ್ಯೋಗವೂ ಇದೆ. ಕೆಲವು Broken Komerege ಬರುತ್ತವೆ. ಇದು ಒಂದು ಕಾರಣವಾಗಿದೆ. ಆದರೆ ನಾವು ಉದ್ಯೋಗ ಒದಗಿಸಲು ಪ್ರಯತ್ನ ಮಾಡುತ್ತಿದ್ದೇವೆ. ಮಕ್ಕಳಿಗೆ ಶಾಲೆಗಳನ್ನು, ರಸ್ತೆಗಳನ್ನು ಒದಗಿಸಲು ಪ್ರಯತ್ನಿಸುತ್ತಿದ್ದೇವೆ. ಆದರೆ ಈ ಕೆಲಸ ಸುಲಭದಲ್ಲ.

ಅದೇ ದಿನಗಳಲ್ಲಿ ಪೋಲೀಸ್ ಸ್ಟೇಷನ್ ಮೇಲೆ ಹಲ್ಲೆ ಆಗಿತ್ತು. ಆಕ್ರಮಣಕಾರರು ತಮ್ಮದೇ ಸಂಗಡಿಗರನ್ನು ಹತ್ಯೆ ಮಾಡಿದರು. ಅದರ ವಿವರ ಸ್ಮರಿಸಿದರು. ಹುಝೂರ್(ಅಬಿಅ) ಹೇಳಿದರು. ಆಕ್ರಮಣ ಮಾಡಿದವನು ಕೆಲ ಅವಧಿ ಹಿಂದೆ ಇಸ್ಲಾಂ ಸ್ವೀಕರಿಸಿದ್ದನು. ಅವನು ಮದುವೆಗೋಸ್ಕರ ಮುಸಲ್ಮಾನನಾಗಿದ್ದ. ಅವನಿಗೆ ಇಸ್ಲಾಂ ಸಿಕ್ಷಣ ಹೇಗೆ ತಿಳಿಯುವುದು. ಯಾವ ಜನರು Radicalise ಆಗಿರುತ್ತಾರೋ, ಯಾರ ಸಂಪರ್ಕ ಮೌಲ್ವಿಗಳೊಂದಿಗೆ ಇರುತ್ತದೆಯೋ ವಾಸ್ತವದಲ್ಲಿ ಅವರು ಇಸ್ಲಾಂ ಧರ್ಮದ ಪ್ರಕಾರ ನಡೆದುಕೊಳ್ಳುವುದಿಲ್ಲ. ಅವರು ಕಲಿಸುವಂತದ್ದು ಇಸ್ಲಾಮ್‌ನೊಂದಿಗೆ ಏನೂ ಸಂಬಂಧವಿಲ್ಲದ್ದು. ನಿಮ್ಮ ಪೋಲೀಸಿನ ಮುಗ್ಧ ಜನರ ಹತ್ಯೆ ಆಗುತ್ತಿದ್ದನ್ನು ಕೇಳಿ ತುಂಬ ವ್ಯಥೆಯಾಯಿತು.

ಹುಝೂರ್(ಅಬಿಅ) ಹೇಳಿದರು. ಈಗ ಇಡೀ ಲೋಕದಲ್ಲಿ (Disterbens) ಅಸಮಧಾನವಿದೆ. ಕೇವಲ ಫ್ರಾನ್ಸ್‌ನಲ್ಲಿ ಮಾತ್ರ ಅಲ್ಲ. ಯು.ಕೆಯಲ್ಲಿಯೂ ಬ್ರಾಕ್ಸಿಟ್ ಕಾರಣಗಳಿಂದಾಗಿ ಜನರು ಗಾಬರಿಯಲ್ಲಿದ್ದಾರೆ. ಹುಝೂರ್(ಅಬಿಅ) ಕೇಳಿದರು. ನೀವು ಈ ಹುದ್ದೆಗೋಸ್ಕರ ಅಧಿಕೃತವಾಗಿ ಆಯ್ಕೆ ಆಗುತ್ತೀರಿ ಅಥವಾ ನಾಮಕರಣ ಮಾಡಲಾಗುತ್ತದೆ? ಅದಕ್ಕೆ ಅವರು ಹೇಳಿದರು. ಅಧ್ಯಕ್ಷರು ಮತ್ತು ಪ್ರಧಾನಿ ಅವರನ್ನು ನಿಯುಕ್ತಗೊಳಿಸಿದ್ದಾರೆ. ಅವರು ಹೇಳಿದರು. ನಾನು Diptomat ಆಗಿರುತ್ತೇನೆ ಜರ್ಮನಿ, ಕ್ರೋಷಿಯಾ ಮತ್ತು ಕಿನ್ಯಾದಲ್ಲಿ ಕೆಲಸ ಮಾಡಿರುತ್ತೇನೆ ಫ್ರೆಂಚ್ Embassay ಅಲ್ಲೂ cultural counsil ಆಗಿದ್ದೇನೆ.

ಅಗ ಹುಝೂರ್(ಅಬಿಅ) ಹೇಳಿದರು. ಈ ಕಾರಣದಿಂದಲು ನಿಮಗೆ ಜಮಾಅತಿನೊಡನೆ ಉತ್ತಮ ಸಂಬಂಧವಿದೆ. ನಾವು ಎಲ್ಲೋ ಇದ್ದರೂ ಶಾಂತಿ ಪ್ರಿಯರಾಗಿರುತ್ತೇವೆ. ಕೀನ್ಯಾದಲ್ಲಿ ನಮ್ಮ community ಇದೆ, ಮಸೀದಿಗಳಿವೆ ವಿವಿಧ ನಗರಗಳಲ್ಲಿ ಕೇಂದ್ರಗಳಿವೆ. ಇತ್ತೀಚೆಗೆ ಫ್ರಾನ್ಸ್‌ನಲ್ಲಿ ನಾವು ಒಂದು Famland ನಲ್ಲಿ ಜಲ್ಸ ಮಾಡಿದ್ದೇವೆ. ತುಂಬ ಒಳ್ಳೆಯ ಚಲಿಗೆ ಇಂತಹ ಬಯಲು ಕ್ಷೇತ್ರಗಳು ನನಗೆ ತುಂಬ ಇಷ್ಟವಾಗುತ್ತವೆ.

ಕೊನೆಯಲ್ಲಿ ಕೃಷಿಯ ನಿಮಿತ್ತವೂ ವಿವಿಧ ಕಾರ್ಯಗಳ ಬಗ್ಗೆ ಚರ್ಚೆಯಾಯಿತು. ಈ ಭೇಟಿಯೂ 8 ಗಂಟೆ 25 ನಿಮಿಷದವರೆಗೆ ಜಾರಿಯಲ್ಲಿತ್ತು. ಕೊನೆಯಲ್ಲಿ ಅವರು ಹುಝೂರ್(ಅಬಿಅ) ರೊಂದಿಗೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

**ವಾಖಿಫಾತ್ ನೌ ಬಾಲಕಿಯರ ತರಗತಿ**

ಅನಂತರ ಕಾರ್ಯಕ್ರಮದನ್ವಯ 6 ಗಂಟೆ 25 ನಿಮಿಷಕ್ಕೆ ಹುಝೂರ್(ಅಬಿಅ) ಅವರೊಂದಿಗೆ ವಾಖಿಫಾತ್ ನೌ ಬಾಲಕಿಯರ ತರಗತಿ ಪ್ರಾರಂಭವಾಯಿತು.

ಕಾರ್ಯಕ್ರಮದ ಪ್ರಾರಂಭವು ಖುರ್‌ಆನ್ ಪಠಣದೊಂದಿಗೆ ಆಯಿತು. ಅದು ಅಝೀಝಾ ಅಶ್‌ನ ಅಮಿಲ್ ನಿರ್ವಹಿಸಿದರು. ಅದರ ಉರ್ದು ಅನುವಾದ ಅಝೀಝಾ ಸಾಲೀಹ ಯೂಸೂಫ್ ಮತ್ತು ಫ್ರೆಂಚ್ ಅನುವಾದ ಅಝೀಝಾ ಈಮಾನ್ ಬದ್ವಿ ಪ್ರಸ್ತುತಪಡಿಸಿದರು.

ಅನಂತರ ಅಝೀಝಾ ಸೇಬಿಯಾ ಹಿಫಾಯತ್ ಹಝ್ರತ್ ರಸೂಲುಲ್ಲಾಹ್(ಸ) ರವರ ಹದೀಸಿನ ಅರೆಬಿ ಪಾಠ ಪ್ರಸ್ತುತಪಡಿಸಿದರು. ಅಝೀಝಾ ವಾಯಿರಾ ಅನಸ್ ಈ ಹದೀಸಿನ ಕೆಳಗಿನ ಉರ್ದು ಅನುವಾದವನ್ನು ಪ್ರಸ್ತುತಪಡಿಸಿದರು.

ಹಝ್ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ. ಹಝ್ರತ್ ರಸೂಲುಲ್ಲಾಹ್(ಸ) ಮಿಮ್‌ಬರಿನ ಮೇಲಿಂದ ಕುತುಬ ವಾಚಿಸುತ್ತಾ ಈ ವಚನ ಓದಿದರು. ಅವನ ಬಲಗೈಯಲ್ಲಿ ಆಕಾಶವು ಸುತ್ತಿಕೊಂಡಿದೆ. ಅವನು ಪರಿಶುದ್ಧನು ಹಾಗೂ ಬಹುದೇವರಾಧನೆಯಿಂದ ಅವನು ಅತ್ಯುನ್ನತನು.

**(ಮುಂದುವರಿಯುವುದು)**

**ಖಾದಿಯಾನ್ ದಾರುಲ್ ಆಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದುನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಾಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್‌ರವರು ಭಾರತದ ಜಮಾಅತಿನ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯ್ಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) ಅಕ್ಟೋಬರ್ 16, 17 ಮತ್ತು 18, 2020 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಜಮಾಅತಿನ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ. **(ಸಂಪಾದಕರು)**

**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**

**ಅನ್ಯ ಗೋತ್ರಗಳೊಂದಿಗೆ ವಿವಾಹ**

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝೂರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 02 April 2020 Issue No. 12

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 09ರ ವರದಿಯ ಉಳಿದ ಭಾಗ)**

ಹುಝೂರ್ ಅನ್ವರ್[ಅಬಿಅ] ಹೇಳಿದರು. ಅಹ್ಮದಿಯಾ ಜಮಾಅತ್ತಿನ ಇತಿಹಾಸವೆ ಇದಕ್ಕೆ ಸಾಕ್ಷ್ಯವಿದೆ. ಅಲ್ಲಾಹನ ವಾಗ್ದಾನದಂತೆ ಅವನ ಭಕ್ತದಾಸರು ದಿನೇ ದಿನ ಪ್ರಗತಿ ಹೊಂದುತ್ತಿದ್ದಾರೆ. ಅವನು ಕಳುಹಿಸಿದ ಇಮಾಮರ ಹೆಜ್ಜೆಗಳು ದಿನೇ ದಿನೇ ಮುಂದಾಗುತ್ತಿರುತ್ತವೆ. ಅವರ ಜಮಾಅತ್ತುಗಳು ಮುಂದುವರೆಯುತ್ತಿರುತ್ತದೆ. ಆ ದೃಶ್ಯಗಳು ನಾವು ಪ್ರತಿದಿನ ನೋಡುತ್ತಿದ್ದೇವೆ. ಇದರ ಕೆಲವು ದೃಷ್ಟಾಂತಗಳು ಇದೀಗ ನಿಮ್ಮ ಮುಂದೆ ಇಡ ಬಯಸುತ್ತೇನೆ. ಯಾವ ರೀತಿ ಅಲ್ಲಾಹನು ಅಸಮಾನ್ಯ ಪ್ರಗತಿ ನೀಡುತ್ತಿದ್ದಾನೆ. ಯಾವ ರೀತಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್[ಅ] ರವರ ಕಾರ್ಯಕ್ರಮಗಳನ್ನು ಪರಿಪೂರ್ಣಗೊಳಿಸುತ್ತಿದ್ದಾನೆ.

ಕೆಮ್ರೂನ್‌ನಿಂದ ನಮ್ಮ ಮುಅಲ್ಲಿಮ್ ಅಬುಬಕ್ಕರ್ ಸಾಹಿಬ್ ಹೇಳುತ್ತಾರೆ. Banyo ನಗರದ ವ್ಯಕ್ತಿಯೊಬ್ಬರಾದ ಅಹ್ಮದ್ ಸಾಹಿಬ್ ನನಗೆ ಫೋನ್ ಮಾಡಿ ಹೇಳಿದರು. ನನಗೆ ಅಹ್ಮದಿಯಾ ಜಮಾಅತಿನ ಬಗ್ಗೆ ಏನೂ ತಿಳಿದಿರಲಿಲ್ಲ. ಆದರೆ ಕೆಲ ದಿನ ಹಿಂದೆ ನನ್ನ ಮಗನಗೆ ಒಂದು ಪಾಮ್‌ಪ್ಲೇಟ್ ದೊರಕಿತು ಅದರ ಮೇಲೆ ಜಾಅಲ್ ಮಸೀಹ್ ಎಂದು ಬರೆಯಲಾಗಿತ್ತು. ನಾನು ಅದೇ ಪಾಮ್‌ಪ್ಲೇಟ್ ನೋಡಿ ನಿಮಗೆ ಫೋನ್ ಮಾಡುತ್ತಿದ್ದೇನೆ. ಅವರು ಹೇಳಿದರು. ನಾನು ನಮಾಝ್ ನಿರ್ವಹಿಸಲು ತುಂಬಾ ಆಲಸ್ಯಪಡುತ್ತಿದ್ದೆ. ಒಂದು ದಿನ ಸ್ವಪ್ನದಲ್ಲಿ ಓರ್ವ ವ್ಯಕ್ತಿ ಬಿಳಿಗಡ್ಡದಾರಿ ವ್ಯಕ್ತಿ ಪ್ರವೇಶ ಮಾಡಿದರು ಮತ್ತು ಹೇಳಿದರು. ಏಳಿರಿ ಮತ್ತು ನಮಾಝ್ ಮಾಡಿರಿ. ನನಗೆ ನಿಯಮಿತವಾಗಿ ನಮಾಝ್ ಮಾಡಲು ಉಪದೇಶ ಮಾಡಿದರು. ಆದ್ದರಿಂದ ಆ ಸ್ವಪ್ನದ ನಂತರ ನಾನು ನಿಯಮಿತವಾಗಿ ನಮಾಝ್ ಮಾಡಲು ಪ್ರಾರಂಭಿಸಿದ್ದೆ. ಒಂದು ದಿನ ಕೇಬಲ್ ಚಾನಲ್‌ನಲ್ಲಿ ಚಾನಲ್ ಬದಲಾಯಿಸುತ್ತಿದ್ದಾಗ. ನನ್ನ ದೃಷ್ಟಿ MTA ಅಫಿಕಾ ಚಾನಲ್ ಮೇಲೆ ಬಿತ್ತು. ಆಗ ಅದರಲ್ಲಿ ಅದೆ ಬಿಳಿ ಗಡ್ಡದವರು ಉಪನ್ಯಾಸ ನೀಡುತ್ತಿದ್ದಾರೆ. ಈ ರೀತಿ ನನಗೆ MTA ಮತ್ತು ಜಮಾಅತಿನ ಬಗ್ಗೆ ಮಾಹಿತಿ ಅಂತೂ ದೊರೆಯಿತು. ಆದರೆ ಕೆಮೀನಿನಲ್ಲಿ ಜಮಾಅತ್ ಇದೆಯೋ ಇಲ್ಲವೋ ಎಂಬುದು ತಿಳಿದಿರಲಿಲ್ಲ. ಈಗ ಪಮ್‌ಪ್ಲೇಟ್ ಮೂಲಕ ಸಂಬಂಧ ಏರ್ಪಟ್ಟಿದೆ. ಆದ್ದರಿಂದ ಮುಅಲ್ಲಿಮ್ ಸಾಹಿಬರು ಅವರಿಗೆ ಪರಿಚಯ ನೀಡಿದರು. ಅವರಿಗೆ ನನ್ನ ಪರಿಚಯ ಮಾಡಿಕೊಟ್ಟರು. ಇವರು ನಮ್ಮ ಖಲೀಫರು ಎಂದು ಹೇಳುವಾಗ ಅವರು ಹೇಳಿದರು. ನನಗೆ ಸ್ವಪ್ನದಲ್ಲಿ ನಿಯಮಿತವಾಗಿ ನಮಾಝ್ ಮಾಡಲು ಉಪದೇಶಿಸಿದವರು ಇವರೇ ಆಗಿದ್ದಾರೆ. ಅವರು ಸುಳ್ಳುಗಾರರಾಗಲು ಸಾಧ್ಯವಿಲ್ಲ. ನಿಶ್ಚಯವಾಗಿಯೂ ಅವರು ಅಲ್ಲಾಹನ ಕಡೆಯವರಾಗಿದ್ದಾರೆ ಮತ್ತು ಈ ಕಾರ್ಯಕ್ಕಾಗಿ ಅಲ್ಲಾಹನು ನಿಯುಕ್ತಗೊಳಿಸಿದ್ದಾನೆ. ಹೀಗೆ ಅವರ ಖಿಲಾಫತ್ ಕುರಿತು ಬೊಟ್ಟು ಮಾಡಿದರು. ಮುಅಲ್ಲಿಮ್ ಸಾಹೇಬರು ಹೇಳಿದರು. ನಿಮ್ಮ Bano ನಗರದಲ್ಲಿ ನಮ್ಮ ಜಮಾಅತ್ ಇದೆ. ಅಲ್ಲಿ ನಮ್ಮ ಒಬ್ಬ ಮಿತ್ರರಾದ ಆದಮ್ ಸಾಹಿಬ್ ಇದ್ದಾರೆ. ಅವರು ನಮ್ಮ ಜಮಾಅತಿನ ಅಧ್ಯಕ್ಷರಾಗಿದ್ದಾರೆ. ಅವರನ್ನು ಭೇಟಿ ಮಾಡಿ. ಆಗ ಅವರು ಅಧ್ಯಕ್ಷರನ್ನು ಭೇಟಿಯಾಗಿ ಬೈಅತ್ ಮಾಡಿ ಜಮಾಅತ್‌ಗೆ ಸೇರಿದರು. ಈಗ ಅಲ್ಲಾಹನ ಅನುಗ್ರಹದಿಂದ ನಿಯಮಿತವಾಗಿ ನಮಾಝ್ ಮಾಡುತ್ತಿದ್ದಾರೆ. MTA ನೋಡುತ್ತಿದ್ದಾರೆ. ತಮ್ಮ ಜ್ಞಾನ ಹಾಗೂ ವಿಶ್ವಾಸದಲ್ಲಿ ಪ್ರಗತಿ ಸಾಧಿಸುತ್ತಿದ್ದಾರೆ.

ಅಮೀರ್ ಸಾಹಿಬ್ ತನ್‌ಝಾನಿಯಾ ಒಂದು ಘಟನೆಯ ಕುರಿತು ಬರೆಯುತ್ತಾರೆ. 1948ರಲ್ಲಿ ಲಂಡನ್ ನಗರದಲ್ಲಿ ಶತ್ರುಗಳು ಮೌಲಾನ ಫಝ್ಲುಲ್ ಇಲಾಹಿ ಸಾಹಿಬ್ ಮುಬಲ್ಲಿಗ್ ಅವರೊಡನೆ ತುಂಬ ದುರ್ವರ್ತನೆ ತೊರಿ ಅವರನ್ನು ಅಲ್ಲಿಂದ ಹೊರ ಕಳುಹಿಸಲಾಗಿತ್ತು. ಈಗ ಅದೇ ನಗರದಲ್ಲಿ ಸ್ಥಳೀಯ ರೇಡಿಯೋದಲ್ಲಿ ಸಾಪ್ತಾಹಿಕವಾಗಿ ಜಮಾಅತ್ ಕಾರ್ಯಕ್ರಮ ಪ್ರಸಾರಗೊಳ್ಳುತ್ತಿದೆ. ಅವರ ಜೊತೆ ಜೊತೆಯಲ್ಲಿ ರೇಡಿಯೋದ 24 ಗಂಟೆಯ ಪ್ರಸಾರಗಳು ಕೇಳುತ್ತಿದ್ದಾರೆ. ಈ ಕಾರ್ಯಕ್ರಮಗಳಿಂದಾಗಿ ಲಂಡನ್ ನಗರದ ದೊಡ್ಡ ಮಸೀದಿಯ ಇಮಾಮ ಸಾಹೇಬರ ಪುತ್ರ ಬೈಅತ್ ಮಾಡುವ ಭಾಗ್ಯ ಪಡೆದರು. ಅವರು ಹಲವು ಶಾಲೆಗಳಿಂದ ವಿದ್ಯೆ ಪಡೆದವರಾಗಿದ್ದಾರೆ. ಬಲು ಮಧುರ ಕಂಠದಿಂದ ಖುರ್‌ಆನ್ ಪಠಣ ಮಾಡುತ್ತಾರೆ. ಜಮಾಅತ್‌ನೊಂದಿಗೆ ಉತ್ತಮ ಸಂಬಂಧ ಹೊಂದಿದ್ದಾರೆ. ಅವರಲ್ಲದೇ ಇನ್ನೊಂದು ಮಸೀದಿಯ ಇಮಾಮರು ಸಹ ಸದ್ಯದಲ್ಲೇ ಅಹ್ಮದಿಯಾಗಿದ್ದಾರೆ. ಅವರು ಹೇಳುತ್ತಾರೆ. ಉತ್ತಮ ವ್ಯಕ್ತಿತ್ವವುಳ್ಳವರಿಂದ ಪ್ರಭಾವಿತರಾಗಿ ಇನ್ನು 50 ಬೈಅತ್‌ಗಳು ನಮಗೆ ಲಭಿಸಿವೆ. ಈಗ ಲಂಡನ್ ನಗರ ಯಾವ ಸ್ಥಿತಿಯಲ್ಲಿದೆ ಎಂದರೆ ಯಾರಾದರೂ ಅಹ್ಮದಿ ಕಾಫಿರ್‌ಗಳಾಗಿದ್ದಾರೆಂದು ಹೇಳಿದರೆ ಸ್ವಯಂ ಅವರೇ ಮುಂದಾಗಿ ಉತ್ತರ ನೀಡುತ್ತಾರೆ. ಅವರು ಅಹ್ಮದಿಯಾಗಿರಲಿ, ಇಲ್ಲದಿರಲಿ. ಒಂದು ಜಾಮಿಯಾ ಮಸೀದಿಯ ಮೌಲ್ವಿ ಸಾಹಿಬ್ ಹೇಳಿದರು. ಅಹ್ಮದಿಯರೊಡನೆ ತರ್ಕ ಮಾಡಬೇಡಿರಿ. ಅವರು ತುಂಬ ಜ್ಞಾನ ಹೊಂದಿದವರಾಗಿದ್ದಾರೆ. ನಮ್ಮ ದೊಡ್ಡ ದೊಡ್ಡ ಮೌಲ್ವಿಗಳು ತಿಳಿಯದಂತಹ ಜ್ಞಾನ ಅವರ ಸಾಮಾನ್ಯ ಮೌಲ್ವಿಗಳು ಹೊಂದಿರುತ್ತಾರೆ.

ಮತ್ತು ನಯ್‌ಜೇರಿಯದ ಒಂದು ಘಟನೆಯಿದೆ (E.J.U) ಸರ್ಕಿಟ್‌ನ ಉಮೋದಲ್ಲಿ ಓರ್ವ ದಾಯಿ ಇಲಲ್ಲಾಹ್ ಮುಬಾರಕ್ ಸಾಹಿಬ್ ನನ್ನ ಖುತುಬ ಜುಮಅ (Live) ತೋರಿಸುತ್ತಿದ್ದರು. ನನ್ನ ಖುತುಬದ ನಂತರ ಸಂಕ್ಷಿಪ್ತವಾಗಿ ತಮ್ಮ ಖುತುಬ ನೀಡುತ್ತಿದ್ದರು. ಓರ್ವ ಅಹ್ಮದಿಯೇತರ ಮಿತ್ರರು ಜಾಮಿಯಾ ಸಾಹಿಬ್ ಜಮಾಅತ್‌ಗಾಗಿ ನಮ್ಮ ಮಸೀದಿಗೆ ಬಂದಿದ್ದರು. ಅವರು ಆಕ್ಷೇಪ ಮಾಡಿದರು ಇದು ಬಿದ್‌ಅತ್ ಆಗಿದೆ. ಇಸ್ಲಾಮಿನ ವಿಧಾನ ಅಲ್ಲ. ನಾವು ಜಮಾಅತ್ ಮಾಡಲು ಬಂದಿದ್ದೆವು. ಆದರೆ ಈಗ ಅಹ್ಮದಿಯಾ ಜಮಾಅತ್ ಟಿ.ವಿ ಮೂಲಕ ಜುಮಅ ಮಾಡಲು ಹೊರಟಿದೆ. ಈ ರೀತಿಯ ಆಕ್ಷೇಪಗಳು ಮಾಡತೊಡಗಿದರು. ಆಗ ಅವರಿಗೆ ತಿಳಿಸಲಾಯಿತು ನಾವು ಈ ರೀತಿಯಲ್ಲಿ ಜುಮಅ ಮಾಡುತ್ತಿಲ್ಲ. ಖುತುಬ ಕೇಳುತ್ತಿದ್ದೇವೆ ನೀವು ಮೊದಲು ಖುತುಬ ಕೇಳಿ ನೋಡಿರಿ. ಆಗ ಅವರು ಖುತುಬಗಳನ್ನು ಆಸಕ್ತಿಯಿಂದ ಕೇಳಿದರು. ಈಗ ಕೆಲ ವಾರಗಳ ಹಿಂದೆ ಅವರು ಕುಟುಂಬ ಸಹಿತ ಬಂದು ಬೈಅತ್ ಮಾಡಿ ಹೇಳಿದರು. ಖಲೀಫತುಲ್ ಮಸೀಹ್ ಅವರ ಖುತುಬಗಳು ನನ್ನನ್ನು ಅಲ್ಲಾಡಿಸಿಬಿಟ್ಟಿದೆ. ಇಂದು ಇಸ್ಲಾಮಿನ ಶಿಕ್ಷಣ ಇದೆ ಎಂದಾದರೆ ಅದು ಖಲೀಫತುಲ್ ಮಸೀಹ್ ಅವರ ಬಳಿ ಮಾತ್ರ. ಯಾವ ರೀತಿ ಅವರು ತಮ್ಮ ಖುತುಬಗಳ ಮೂಲಕ ಮುಸಲ್ಮಾನರ ಏಳಿಗೆಗಾಗಿ ಮಾರ್ಗದರ್ಶ ನೀಡುತ್ತಿದ್ದಾರೆ ಅದರಿಂದ ಅವರು ನಮ್ಮ ಹೃದಯಗಳ ಅಂತರಂಗವನ್ನು ತಿಳಿದಿರುವಂತೆ ಭಾಸವಾಗುತ್ತದೆ. ನಿಶ್ಚಯವಾಗಿಯೂ ಇದು ಅಲ್ಲಾಹನ ವತಿಯಿಂದ ಮಾರ್ಗದರ್ಶನವಾಗಿದೆ. ಆದ್ದರಿಂದ ನಾನು ನನ್ನ ಪತ್ನಿ ಮಕ್ಕಳ ಸಹಿತ ಜಮಾಅತಿಗೆ ಸೇರಿ ಇಸ್ಲಾಮಿನ ನಿಜವಾದ ಶಿಕ್ಷಣದನ್ವಯ ನಮ್ಮ ಜೀವನ ನಡೆಸ ಬಯಸುತ್ತೇವೆ.

ಸಹಾರನ್‌ಪೂರ್, ಇಂಡಿಯಾದಿಂದ ಅಖ್ತರ್ ಸಾಹಿಬರೊಬ್ಬರು ತನ್ನ ಅಹ್ಮದಿಯತ್ ಸ್ವೀಕಾರದ ಘಟನೆಯನ್ನು ಹೇಳುತ್ತಾರೆ. ನಾನು 2007 ರಲ್ಲಿ ಸ್ವಪ್ನದಲ್ಲಿ ಓರ್ವ ಸಜ್ಜನರನ್ನು ಕಂಡೆ. ಅವರ ಮುಖ ತುಂಬ ಪ್ರಕಾಶಮಯವಾಗಿತ್ತು. ಅದು ಅವರ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿತು. ಮತ್ತು ಹೇಳುತ್ತಾರೆ. ನಾನು 2009 ರಂದು ಪಾಕಿಸ್ತಾನಕ್ಕೆ ಹೋದಾಗ ಅಲ್ಲಿ ಅಹ್ಮದಿಯಾ ಜಮಾಅತ್‌ನ ವಿರೋಧಗಳ ಬಗ್ಗೆ ಕೇಳಿದೆ. ಆಗ ನನ್ನ ಮನದಲ್ಲಿ ಒಂದು ಕುತೂಹಲ ಉಂಟಾಯಿತು. ಈ ಜಮಾಅತ್ ಯಾವುದು ಎಂದು. ಸಂಶೋಧನೆ ಮಾಡಿದರೆ

*(ಉಳಿದ ವರದಿ ಪುಟ ಸಂಖೆ 09 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.